# ಹಂಪಿ ಟೈಮ್ಸ್

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 279 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 14.05.2025 • ಬುಧವಾರ • ಪುಟ:04 • ಬೆಲೆ:2
Volume:02 • Issue: 279 • PRGI No:KARKAN/2023/88055 • VIJAYANAGARA • 14.05.2025 • Wednesday • Page:04 • Rs:2



1,30,000+
Digital E-PAPER READERS
To book Classified Display Ad
in HAMPI TIMES
Please call on
9448633038



No.1 HAMPI TIMES LEADING PRINT & DIGITAL District News Paper



ನಿಮ್ಮ ಜಾಹೀರಾತು ಈಗ ಜಗದಗಲ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1.25 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು
94486 33038 hampitimes@gmail.com

ಮುದ್ರಣ ಜಾಹೀರಾತಿಗೆ ಪಾವತಿಸಿ
ಪಡೆಯಿರಿ ಡಿಜಿಟಲ್ ಆವೃತ್ತಿ ಉಚಿತ*
ಮೊದಲು ಬುಕ್ಕಿಂಗ್ ಮಾಡಿದವರಿಗೆ ಮೊದಲ ಆದ್ಯತೆ

ಹಂಪಿ ಟೈಮ್ಸ್ ಇ-ಪೇಪರ್
*conditions apply

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


### ನಿನಗೆ ನೀನೇ ಬೆಳಕು

ಶಿಕ್ಷಣವೇ ಭವಿಷ್ಯದ ಅಸ್ತ್ರ
ಅದನ್ನು ಪಡೆದವರೇ ನವ ವಿಶ್ವವನ್ನು
ರೂಪಿಸಬಲ್ಲರು.

### ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

**ಮೈಕ್ರೋ ನ್ಯೂಸ್**

## ಮೇ 21 ಶ್ರೀ ಹುಲಿಗೆಮ್ಮ ದೇವಿ ಮಹಾ ರಥೋತ್ಸವ



**ಹಂಪಿ ಟೈಮ್ಸ್ ಕೊಪ್ಪಳ**

ಹಿಂದು ಧಾರ್ಮಿಕ ಧರ್ಮಾದಾಯ ದತ್ತಿಗಳ ಇಲಾಖೆ ಹಾಗೂ ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೊಪ್ಪಳ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಹುಲಿಯ ಶ್ರೀ ಹುಲಿಗೆಮ್ಮ ದೇವಿ ಜಾತ್ರಾ ಮಹೋತ್ಸವು ಮೇ 20 ರಿಂದ 24 ರವರೆಗೆ ನಡೆಯಲಿದ್ದು, ಮಹಾ ರಥೋತ್ಸವವು ಮೇ 21ರ ಸಂಜೆ 5.30ಕ್ಕೆ ಜರುಗಲಿದೆ.

ಮೇ 22ರಂದು ಬಾಳಿದಂಡಿಗೆ ಆರೋಹಣ ಕಾರ್ಯಕ್ರಮ, ಏಕಾದಶಿ ಶುಕ್ರವಾರಂದು ದೇವಿಗೆ ಪಾಯಸ ಪ್ರಸಾದ ನಿವೇದನೆ ಕಾರ್ಯ ಹಾಗೂ ಶನಿವಾರ ದ್ವಾದಶಿ ನಸುಕಿನಲ್ಲಿ ಅಗ್ನಿಕುಂಡ ನಡೆಯಲಿದ್ದು, ಜೂನ್ 17 ರಂದು ರಾತ್ರಿ 8 ಗಂಟೆಗೆ ಶ್ರೀ ಹುಲಿಗೆಮ್ಮ ದೇವಿಯವರ ಕಂಕಣ ವಿಸರ್ಜನೆ ಮಾಡಲಾಗುವುದು ಎಂದು ಶ್ರೀ ಹುಲಿಗೆಮ್ಮ ದೇವಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

## ಉಚಿತ ಸಹಾಯವಾಣಿ ಆರಂಭ

**ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ ತಾಲ್ಲೂಕಿನ 25 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಹಾಗೂ ಇತರೆ ಕುಂದು-ಕೊರತೆಗಳಿಗೆ ಸಂಬಂಧಿಸಿದಂತೆ ದೂರು ಸಲ್ಲಿಸಲು ಬಳ್ಳಾರಿ ತಾಲ್ಲೂಕು ಪಂಚಾಯತಿ ಕಾರ್ಯಾಲಯದಲ್ಲಿ ಉಚಿತ ಸಹಾಯವಾಣಿ ಸಂಖ್ಯೆ 08392-266695 ಪ್ರಾರಂಭಿಸಲಾಗಿದ್ದು, ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಬಳ್ಳಾರಿ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ತಿಳಿಸಿದ್ದಾರೆ.


Classifide / Display ADS
Contact:
94486 33038


### ನುಡಿದಂತೆ ನಡೆದ ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ | ವಿದ್ಯಾರ್ಥಿಗಳಲ್ಲಿ ವಿದ್ಯಾಭ್ಯಾಸದತ್ತ ಒಲವು ಹೆಚ್ಚಳಕ್ಕೆ ಪ್ರೋತ್ಸಾಹ

# ಎಸ್ಸೆಸ್ಸೆಲ್ಸಿ ಟಾಪರ್ಸ್‌ಗೆ ಸ್ಕೂಟಿ ಜತೆ ನಗದು ಬಹುಮಾನ

### 624 ಅಂಕ ಪಡೆದ ಯಶ್ವಂತ್‌ಗೆ ಸ್ಕೂಟಿ+1 ಲಕ್ಷ ನಗದು, ಐವರಿಗೆ ಸ್ಕೂಟಿ+50 ಸಾವಿರ, ಡಿಡಿಪಿಐಗೆ ವಾಚ್ ಉಡುಗೊರೆ





**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲೆಯಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ಟಾಪರ್ಸ್ ವಿದ್ಯಾರ್ಥಿಗಳಿಗೆ ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಮಂಗಳವಾರ ಸ್ಕೂಟಿ ದ್ವಿಚಕ್ರವಾಹನ ವಿತರಿಸಿ ಪ್ರೋತ್ಸಾಹಿಸಿದರು.

ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ವಾಹನಗಳ ಕೀ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಮುಂದಿನ ವಿದ್ಯಾಭ್ಯಾಸಕ್ಕೆ ಉತ್ತೇಜಿಸಲು ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಬಹುಮಾನ ವಿತರಿಸಲಾಗಿದೆ. ಎಸ್ಸೆಸ್ಸೆಲ್ಸಿಯಲ್ಲಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಬುಕ್ಕಸಾಗರದ ಮೊರಾರ್ಜಿ ವಸತಿ ಶಾಲೆಯ ಯಶವಂತ್ 625 ಕ್ಕೆ 624 ಅಂಕಗಳನ್ನು ಪಡೆದ ಹಿನ್ನಲೆಯಲ್ಲಿ ನಗದು ಒಂದು ಲಕ್ಷರೂಗಳು ಸೇರಿ ಸ್ಕೂಟಿ ದ್ವಿಚಕ್ರವಾಹನ ನೀಡಲಾಗಿದೆ. ಉಳಿದ ಐವರು ವಿದ್ಯಾರ್ಥಿಗಳಿಗೆ ನಿಹಾರ್, ಅಭಿಷೇಕ್, ಹೇಮಂತ್, ಉಮೇಶ್, ಲಕ್ಷ್ಮೀ ಇವರಿಗೆ ಸ್ಕೂಟಿ ಜೊತೆಗೆ ತಲಾ 50 ಸಾವಿರ ರೂಗಳನ್ನು ನೀಡಲಾಗಿದೆ. ವಿದ್ಯಾರ್ಥಿಗಳಿಗೆ ನೀಡಿರುವ ಬೈಕ್‌ಗಳನ್ನು 18 ವರ್ಷ ತುಂಬದೇ ಚಾಲನಾ ಪರವಾನಿಗೆ ಇಲ್ಲದ ಕಾರಣ ಲೈಸನ್ಸ್ ಹೊಂದುವವರೆಗೆ ತಮ್ಮ ಪೋಷಕರಿಗೆ ನೀಡಿ ಎಂದು ತಿಳಿಸಿ ಬೈಕನ್ನು ಉಡುಗೊರೆಯಾಗಿ ನೀಡಿದರು. ವಿದ್ಯಾರ್ಥಿ ದಿಸೆಯಲ್ಲಿ ಪ್ರಮುಖವಾಗಿ ಮೂರು ಹಂತಗಳು ಪ್ರಮುಖ. ಮೊದಲನೆಯ ಹಂತ 7ನೇ ತರಗತಿ, 10ನೇ ತರಗತಿ, ಪಿಯುಸಿ ಪ್ರಮುಖ ಘಟ್ಟವಾಗಿದೆ. ಈ ವರ್ಷ ಪಿಯುಸಿ ಫಲಿತಾಂಶದಲ್ಲಿ ರಾಜ್ಯದಲ್ಲೇ ಅತ್ಯುನ್ನತ ಅಂಕ ಪಡೆದ ಇಬ್ಬರು ವಿದ್ಯಾರ್ಥಿನಿಯರಿಗೆ ಸ್ಕೂಟಿ ಸೇರಿ ಐದು ಲಕ್ಷರೂಗಳನ್ನು ನೀಡಿ ಮುಂದಿನ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಿಸಲಾಗಿತ್ತು. ಅದೇ ಸಂಧರ್ಭದಲ್ಲಿ ಎಸ್ಸೆಸ್ಸೆಲ್ಸಿ ಟಾಪರ್ಸ್‌ಗಳಿಗೆ ಉಡುಗೊರೆ ನೀಡಲು ಪ್ರಸ್ತಾಪಿಸಲಾಗಿತ್ತು. ಅದರಂತೆ ಉನ್ನತ ಅಂಕ ಪಡೆದ ವಿದ್ಯಾರ್ಥಿಗಳಿಗೆ ಉಡಗೊರೆ ನೀಡಿ ಪ್ರೋತ್ಸಾಹಿಸಲಾಗಿದೆ ಎಂದರು.

ಬಳಿಕ ವೇದಿಕೆಯಲ್ಲಿ ಜಿಲ್ಲೆಯಲ್ಲಿ ಉತ್ತಮ ಫಲಿತಾಂಶ ಪಡೆದ ಹಿನ್ನಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ವೆಂಕಟೇಶ್ ರಾಮಚಂದ್ರಪ್ಪರಿಗೆ ಗೌರವಿಸಿ ಸನ್ಮಾನಿಸಿ ವಾಚ್‌ನ್ನು ಉಡುಗೊರೆಯಾಗಿ ನೀಡಿದರು. ಈ ವೇಳೆ ಕಂಪ್ಲಿ ಶಾಸಕ ಜೆ.ಗಣೇಶ್, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ಹುಡಾ ಅಧ್ಯಕ್ಷ ಹೆಚ್.ಎನ್.ಎಫ್. ಇಮಾಮ್ ನಿಯಾಜಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿರಾಜ್ ಶೇಕ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಹರಿಬಾಬು ಬಿ.ಎಲ್, ಜಿಪಂ ಸಿಇಒ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಪ್ರಭಾರಿ ಕ್ಷೇತ್ರ ಶಿಕ್ಷಣಾಧಿಕಾರಿ ಶೇಖರಪ್ಪ ಹೊರಪೇಟೆ, ಡಿಡಿಪಿಐ ಕಚೇರಿ ಸಿಬ್ಬಂದಿ ಇತರರು ಉಪಸ್ಥಿತರಿದ್ದರು.


ಹಂಪಿ ಟೈಮ್ಸ್
SCAN TO WATCH



SSLC ಹೈಸ್ಕೋರ್ ಸೀಕ್ರೇಟ್ ಏನು ಗೊತ್ತಾ
ಟಾಪರ್ ಇಂದುಶ್ರೀ ಮಾತಲ್ಲೇ ಕೇಳಿ...


### ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಖರ್ಗೆ ಭಾಗಿ
### ಸಚಿವ ಜಮೀರ್ ಅಹ್ಮದ್ ಖಾನ್ ಹೇಳಿಕೆ | ಮೇ 20 ರಂದು ಸಮಾವೇಶ

# ಸಾಧನಾ ಸಮಾವೇಶಕ್ಕೆ 2 ಲಕ್ಷ ಜನ ನಿರೀಕ್ಷೆ



**ಹಂಪಿ ಟೈಮ್ಸ್ ಹೊಸಪೇಟೆ**

ಯಶಸ್ವಿ ಎರಡು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಹೊಸಪೇಟೆಯಲ್ಲಿ ನಡೆಯಲಿರುವ ಸರ್ಕಾರದ ಸಾಧನಾ ಸಮಾವೇಶಕ್ಕೆ ಲೋಕಸಭಾ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ರಾಜ್ಯಸಭಾ ನಾಯಕರು ಹಾಗೂ ಐಎಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಆಗಮಿಸಲಿದ್ದಾರೆ ಎಂದು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಹೇಳಿದರು.

ಮಂಗಳವಾರ ನಗರದ ಪುನೀತ್ ರಾಜಕುಮಾರ್ ಜಿಲ್ಲಾ ಕ್ರೀಡಾಂಗಣಕ್ಕೆ ಭೇಟಿ ನೀಡಿ ವೇದಿಕೆ ನಿರ್ಮಾಣ ಪರಿಶೀಲಿಸಿ ಬಳಿಕ ಮಾತನಾಡಿದರು. ಮೇ.20 ರಂದು ಹೊಸಪೇಟೆಯಲ್ಲಿ ನಡೆಯುವ ಸರ್ಕಾರದ ಸಾಧನಾ ಸಮಾವೇಶದಲ್ಲಿ 1 ಲಕ್ಷ ಫಲಾನುಭವಿಗಳಿಗೆ ಹಕ್ಕು ಪತ್ರಗಳನ್ನು ವಿತರಿಸುವ ಮೂಲಕ ಸಮರ್ಪಣಾ ಸಮಾವೇಶ ಮಾಡಲಾಗುವುದು. ಸಮಾರಂಭದ ಸಕಲ ಸಿದ್ಧತೆಗೆ ತಯಾರಿ ನಡೆಸಲಾಗಿದೆ. ವಿಜಯನಗರ ಜಿಲ್ಲೆಯ ಮೇಲೆ ಸಿಎಂ ಸಿದ್ದರಾಮಯ್ಯರಿಗೆ ವಿಶೇಷ ಕಾಳಜಿ ಇದೆ. ಈ ಭಾಗದ ಎಲ್ಲಾ ಶಾಸಕರು, ಪಕ್ಷದ ಮುಖಂಡರು, ಕಾರ್ಯಕರ್ತರು ಕಾರ್ಯಕ್ರಮದ ಯಶಸ್ವಿಗೆ ಸಹಕರಿಸಲಿದ್ದಾರೆ. ಜಿಲ್ಲಾ ಕ್ರೀಡಾಂಗಣದಲ್ಲಿ ವೇದಿಕೆ ಸೇರಿದಂತೆ ಆಗಮಿಸುವ ಜನತೆಗೆ ಅಗತ್ಯ ಮೂಲ ಸೌಲಭ್ಯ ಗಳನ್ನು ಕಲ್ಪಿಸಲಾಗುವುದು. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸುವ ನಿರೀಕ್ಷೆ ಇದೆ. ಸರ್ಕಾರದ ಸಾಧನಾ ಸಮಾವೇಶಕ್ಕೆ ಸಂಪುಟದ ಎಲ್ಲಾ ಸಚಿವರು, ಸಂಸದರು, ಶಾಸಕರು ಸೇರಿದಂತೆ ಅನೇಕ ಮುಖಂಡರು ಆಗಮಿಸುತ್ತಿದ್ದಾರೆ ಎಂದರು.

ಈ ವೇಳೆ ಸಂಸದ ಈ.ತುಕಾರಾಂ, ಶಾಸಕರಾದ ಹೆಚ್.ಆರ್.ಗವಿಯಪ್ಪ, ಜೆ.ಗಣೇಶ್, ಕೆಎಂಎಫ್ ಅಧ್ಯಕ್ಷ ಭೀಮಾನಾಯ್ಕ, ಹುಡಾ ಅಧ್ಯಕ್ಷ ಹೆಚ್.ಎನ್.ಎಫ್ ಇಮಾಮ್ ನಿಯಾಜಿ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿರಾಜ್ ಶೇಕ್, ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ಎನ್.ಎಂ. ಅಲಿ ಅಕ್ರಮ್ ಷಾ, ಎಸ್ಪಿ ಡಾ.ಶ್ರೀಹರಿಬಾಬು.ಬಿ.ಎಲ್ ಇದ್ದರು.



ಕುಶಾಲನಗರದಲ್ಲಿ ಮೂರುದಿನದ ರಾಜ್ಯಮಟ್ಟದ ಸೀನಿಯರ್ ಪುರುಷರ ಕಬಡ್ಡಿ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಲು ತೆರಳಿದ ವಿಜಯನಗರ ಜಿಲ್ಲಾ ಕಬಡ್ಡಿ ತಂಡದ ಆಟಗಾರಿಗೆ ಸಮಾಜ ಸೇವಕ ಕೆ.ರವಿಶಂಕರ ಸೋಮವಾರ ಸಮವಸ್ತ್ರ ನೀಡಿ ಶುಭಹಾರೈಸಿ, ಆಟಗಾರರು ಕ್ರೀಡೆಗಳಲ್ಲಿ ಒಗ್ಗಟ್ಟಿನೊಂದಿಗೆ ಭಾಗವಹಿಸಿ ಜಿಲ್ಲೆಯ ಕೀರ್ತಿ ಹೆಚ್ಚಿಸಬೇಕು ಎಂದರು. ವಿಜಯನಗರ ಕಾಲೇಜ್ ಆಡಳಿತ ಮಂಡಳಿ ಅಧ್ಯಕ್ಷ ಮೆಟ್ರಿ ಮಲ್ಲಿಕಾರ್ಜುನ, ಕೋಚ್, ಮ್ಯಾನೇಜರ್ ಇತರರು ಇದ್ದರು.

## ಸಾಲ ಬಾಧೆ: ಯುವ ರೈತ ಆತ್ಮಹತ್ಯೆ

**ಹಂಪಿ ಟೈಮ್ಸ್ ಕೂಡ್ಲಿಗಿ**



ಸಾಲ ಬಾಧೆಯಿಂದ ಬಳಲುತ್ತಿದ್ದ ಯುವ ರೈತ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ ಘಟನೆ ತಾಲ್ಲೂಕಿನ ಬೆಳ್ಳಗಟ್ಟ ಗ್ರಾಮದಲ್ಲಿ ಸೋಮವಾರ ಮಧ್ಯಾಹ್ನ 2ರಿಂದ 3 ಗಂಟೆ ಸುಮಾರಿಗೆ ನಡೆದಿದೆ. ಪರಮೇಶ್ವರ ಪಿ (34) ಆತ್ಮಹತ್ಯೆಗೆ ಶರಣಾದ ಯುವ ರೈತ ಎಂದು ಗುರುತಿಸಲಾಗಿದೆ. ಮೃತನ ತಂದೆ ತಿಪ್ಪೇಸ್ವಾಮಿ ಅವರ ಹೆಸರಿನಲ್ಲಿ ನಾಲ್ಕು ಎಕರೆ ಹೊಲ ಇದ್ದು, ಅವರ ಹೆಸರಿನಲ್ಲಿ 3 ವರ್ಷದ ಹಿಂದೆ ವ್ಯವಸಾಯಕ್ಕಾಗಿ, ರಾಮದುರ್ಗ ಗ್ರಾಮದ ಪ್ರಗತಿ ಗ್ರಾಮೀಣ ಬ್ಯಾಂಕಿನಲ್ಲಿ ಸಾಲ ಮಾಡಿದ್ದು, 2 ವರ್ಷಗಳಿಂದ ಹೊಲಕ್ಕೆ ಹಾಕಿದ ಬೆಳೆ ಸರಿಯಾಗಿ ಬಾರದೆ ಬ್ಯಾಂಕಿಗೆ ಸಾಲವನ್ನು ವಾಪಸ್ ಕಟ್ಟಲು ಆಗಿರುವುದಿಲ್ಲ ಹಾಗೂ ತಮ್ಮ ಹೊಲದಲ್ಲಿ ಹಾಕಿದ ಹತ್ತಿ ಕೈಕೊಟ್ಟ ಬೆಳೆ ಹಾಗೂ ಬೋರ್‌ವೆಲ್ ಕೊರೆಸಲು ಸಾಲ ಮಾಡಿ ಬೋರ್ವೆಲ್ ಫೇಲಾದ ಕಾರಣ ಜೀವನದಲ್ಲಿ ಜಿಗುಪ್ಸೆಗೊಂಡು ಬೆಳ್ಳಗಟ್ಟ ಗ್ರಾಮದ ತಮ್ಮ ಮನೆಯ ಛಾವಣಿ ತೀರಿಗೆ ತನ್ನ ಲುಂಗಿಯಿಂದ ನೇಣು ಬಿಗಿದುಕೊಂಡು ಮೃತಪಟ್ಟಿರುತ್ತಾನೆ. ತಂದೆ ತಿಪ್ಪೇಸ್ವಾಮಿ ನೀಡಿದ ದೂರಿನಂತೆ ಗುಡೇಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮಕ್ಕಳಿಗೆ ಪಠ್ಯದ ಜತೆ ಪಠ್ಯೇತರ ಚಟುವಟಿಕೆಯಲ್ಲೂ ಆಸಕ್ತಿ ಬೆಳೆಸಿ



**ಹಂಪಿ ಟೈಮ್ಸ್ ಕೊಪ್ಪಳ**

ಮಕ್ಕಳಿಗೆ ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಾದ ಯೋಗ ಕರಾಟೆ ಸಮೂಹ ನೃತ್ಯ ಸಮೂಹ ಸಂಗೀತ ಚಿತ್ರಕಲೆ ಜೇಡಿ ಮಣ್ಣಿನ ಕಲೆಯನ್ನು ಈ ಬೇಸಿಗೆ ಶಿಬಿರದಲ್ಲಿ ಕಲಿತುಕೊಳ್ಳಬೇಕೆಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶೇಖರಗೌಡ ಜಿ ರಾಮತ್ನಾಳ್ ಮಕ್ಕಳಿಗೆ ಹೇಳಿದರು.

ಕೊಪ್ಪಳದ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ರಾಜ್ಯ ಬಾಲ ಭವನ ಸೊಸೈಟಿ, ಬೆಂಗಳೂರು, ಜಿಲ್ಲಾ ಪಂಚಾಯತ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲ ಭವನ ಸಮಿತಿ ಕೊಪ್ಪಳ ಇವರ ಸಹಯೋಗದಲ್ಲಿ ಹಮ್ಮಿಕೊಳ್ಳಲಾದ 2025-26 ಸಾಲಿನ ಬೇಸಿಗೆ ಶಿಬಿರವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದರು. ಕೊಪ್ಪಳ ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷ ಪ್ರಕಾಶ್ ಕಡಗದ >>4

# ಬದುಕೇ ಹಸಿರು ಪ್ರೀತಿ ಬೆರೆತಾಗ

■ ಭೋಜರಾಜ ಸೊಪ್ಪಿಮಠ, ಕೊಪ್ಪಳ

ಕುಟುಂಬದಲ್ಲಿ ಗಂಡ ಹೆಂಡತಿಯ ಮಧ್ಯೆ ಪರಸ್ಪರ ಹೊಂದಾಣಿಕೆ, ವಿಶ್ವಾಸ, ಸಹನೆ ಇರಬೇಕಾದುದು ಅವಶ್ಯ. ಅಂತಹ ಕುಟುಂಬಗಳಲ್ಲಿ ಸಾಮರಸ್ಯ ತಂತಾನೇ ಇರುತ್ತದೆ. ಪರಸ್ಪರರನ್ನು ಅರ್ಥೈಸಿಕೊಂಡು ಯಾವುದೇ ಭಿನ್ನಾಭಿಪ್ರಾಯ ಉಂಟಾಗದಂತೆ ಜೀವನ ನಡೆಸಬಹುದು. ಉತ್ತಮ ವೈವಾಹಿಕ ಜೀವನಕ್ಕೆ ಕೆಲವು ಅಗತ್ಯ ಮನೋಭಾವನೆ ಬೆಳಸಿಕೊಳ್ಳಬೇಕು. ಕೆಲವು ಬಾಧ್ಯತೆಗಳಿದ್ದರೆ ಇನ್ನೂ ಚನ್ನ. ಅಂತಹ ವೈವಾಹಿಕ ಬದುಕಿಗೆ ಒಂದಷ್ಟು ಟಿಪ್ಸ್ ನೋಡೋಣ.



ಒಳ್ಳೆಯ ಸಂಗಾತಿ ಜೊತೆಗಿದ್ದರೆ ಜೀವನದ ಯಾವುದೇ ಸ್ಥಿತಿಗತಿಗಳಲ್ಲಿ ಜೊತೆಯಾಗಿರುವದಲ್ಲದೇ ಸಮ ಚಿತ್ತದಿಂದ ಪರಿಹಾರ ಮಾರ್ಗಗಳನ್ನು ತೋರಿಸುವುದು, ತಮ್ಮ ಮನದಲ್ಲಿಯ ದುಗುಡಗಳನ್ನು ಬಾಯಿ ಬಿಟ್ಟು ಹೇಳದಿದ್ದರೂ ಗ್ರಹಿಸುವ ಜಾಣ್ಮೆ ಅವರ ಸ್ವಭಾವದಿಂದ ಬಂದುಬಿಟ್ಟಿರುತ್ತದೆ. ಅಂತಹ ಸಂಗಾತಿ ನಾವಾಗಲು ಪ್ರಯತ್ನಿಸಿದರೆ ನಮ್ಮನ್ನು ಅತೀ ಹೆಚ್ಚು ಪ್ರೀತಿಸುವ ವ್ಯಕ್ತಿ ಅವರಾಗುತ್ತಾರೆ.

ಯಾವುದೋ ಒಂದು ವಿಷಯಕ್ಕೆ ವಿಭಿನ್ನ ಅಭಿಪ್ರಾಯ ಬಂದರೆ ಪರಸ್ಪರ ಚರ್ಚಿಸುವುದು ಒಳಿತು. ಅವರಿಬ್ಬರಲ್ಲಿ ಯಾರ ಅಭಿಪ್ರಾಯ ಹೆಚ್ಚು ಒಳ್ಳೆಯ ಮಾರ್ಗವಾಗಬಲ್ಲದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಇತರರ ಅಭಿಪ್ರಾಯಗಳನ್ನು ಗೌರವಿಸುವ ಗುಣ ನಮ್ಮಲ್ಲಿ ಬರಬೇಕು. ಅದರಿಂದ ಅವರು ಹೆಮ್ಮೆ ಪಡುವರು.

ಗಂಡ ಹೊರಗೆ ದುಡಿಯುತಿದ್ದರೆ ಹೆಂಡತಿ ಆತನಿಗೆ ಸಿದ್ಧ ಮಾಡಿ ಕೊಡುವದನ್ನು ಸೇವೆ ಎಂದುಕೊಳ್ಳಬಾರದು ಅಥವಾ ನಾನು ನಿನ್ನನ್ನು ಸಾಕುತಿದ್ದೇನೆ ಎಂಬ ಕೆಟ್ಟ ವಿಚಾರ ಗಂಡನಲ್ಲಿರಬಾರದು. ಒಬ್ಬರಿಗೊಬ್ಬರು ಮಾಡುವುದು ಸೇವೆಯಲ್ಲ. ಅದೊಂದು ಬಂಧ. ಆ ಬಾಂಧವ್ಯಕ್ಕಾಗಿ ಬದುಕುತಿದ್ದೇವೆ ಎಂದು ಅರ್ಥ ಮಾಡಿಕೊಳ್ಳಬೇಕು.



ತಿಳಿದೋ ತಿಳಿಯದೆಯೋ ತಪ್ಪಾಗುವುದು ಸಹಜ. ಹಾಗೊಂದು ವೇಳೆ ಅವರಿಂದ ತಪ್ಪಾಗಿದ್ದರೆ ಕ್ಷಮಿಸಿ ಬಿಡಬೇಕು. ತಮ್ಮಿಂದಲೂ ತಪ್ಪಾಗಿದ್ದರೆ ಕ್ಷಮೆ ಕೇಳಲು ಹಿಂಜರಿಕೆ ತೋರಬಾರದು. ಬಿಗುಮಾನ ತೋರಿಸದೇ ಅಭಿಮಾನ ಮೂಡಿಸಬೇಕು.

ಎಷ್ಟೇ ಕಷ್ಟ ಪಡುವ ಮನೋಧೈರ್ಯ ಇದ್ದರೂ, ನೋವನ್ನು ನುಂಗಿ ಹಸನ್ಮುಖಿಯಾಗಿದ್ದರೂ ಸಂಗಾತಿಯ ಸಹಕಾರವಿರದಿದ್ದರೆ ಎಲ್ಲವೂ ನಿರರ್ಥಕ. ಅಂತಹ ಸಂದರ್ಭದಲ್ಲಿ ಎಲ್ಲಾ ಪರಿಸ್ಥಿತಿಗಳಿಗೂ ಹೆಗಲು ಕೊಡಬೇಕು. ಯಾರೆಷ್ಟೇ ಧೈರ್ಯ ಹೇಳುತ್ತಾರೆಂದರೂ ಸಂಗಾತಿ ತೋರುವ ಸಾಂತ್ವನ, ಧೈರ್ಯದ ಮಾತುಗಳೇ ಪರಿಣಾಮಕಾರಿ. ಹಾಗಾಗಿ ಪರಸ್ಪರರಲ್ಲಿ ಮನೋಸ್ಥೈರ್ಯ ಕೊಡುವ ಗುಣವಿರಬೇಕು.

ಒಬ್ಬರ ಏಳ್ಗೆಯನ್ನು ಕಂಡು ಇನ್ನೊಬ್ಬರು ಅಸಹನೆ ತೋರಬಾರದು. ಸ್ವಾತಂತ್ರ್ಯವೂ ಇರಬೇಕು. ಜೊತೆಗೆ ತಪ್ಪು ದಾರಿ ಕಂಡಾಗ ನೇರವಾಗಿ ತಿಳಿಸಿ ಹೇಳಬೇಕು. ಯಾವುದೂ ಅತೀ ಎನ್ನಿಸಬಾರದು. ಪ್ರೋತ್ಸಾಹ ಹಾಗೂ ಮೂಗುದಾರ ಎರಡೂ ಇರಬೇಕು. ತಮ್ಮ ಮಧ್ಯೆ ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಕುಟುಂಬದ ಇತರರ ಮುಂದೆ, ನಾಲ್ಕು ಜನರ ಮಧ್ಯೆ ಕೀಳಾಗಿ ನೋಡಬಾರದು. ಬಯ್ಯಬಾರದು. ಒಬ್ಬರೇ ಇದ್ದಾಗ ತಿಳಿಸಿ ಹೇಳುವುದು ಹೆಚ್ಚು ಸಮಂಜಸ. ಅದು ಪರಿಣಾಮವೂ ಹೌದು.

ಕುಟುಂಬದ ಖರ್ಚುಗಳನ್ನು ಆದಷ್ಟು ಮಿತವಾಗಿಟ್ಟುಕೊಂಡು ಆದಾಯದ ಮೂಲವನ್ನು ಹೆಚ್ಚಿಸುತ್ತಾ ಕುಟುಂಬದ ಕಡೆ ಹೆಚ್ಚು ಗಮನ ಕೊಡುವ ಸಂಗಾತಿ ಇದ್ದರಂತೂ ಅದೊಂದು ಪುಣ್ಯ. ಬೇರೆಯವರ ಜೀವನ ಶೈಲಿಯಿಂದ ಪ್ರಭಾವಿತರಾಗಿ ಪೀಡಿಸುವುದು, ತೊಂದರೆ ಕೊಡುವುದು ಸಲ್ಲದು. ಇದರಿಂದ ಅಶಾಂತಿ, ವೈಮನಸ್ಸು ಉಂಟಾಗಿ ಸಂಬಂಧ ಹದಗೆಡುತ್ತದೆ. ಹಾಸಿಗೆ ಇದ್ದಷ್ಟು ಕಾಲು ಚಾಚುವುದು ಅರಿತಿರಬೇಕು. ಆಗ ಸಂಬಂಧ ವೃದ್ಧಿಸುವುದು.

ನಿಮ್ಮೂರ ಜಾತ್ರಾ ಮಹೋತ್ಸವಕ್ಕೆ ಸ್ವಾಗತ/ ಶುಭಾಶಯ
ಸಾಧಕರಿಗೆ ಅಭಿನಂದನೆ ಕೋರುವ ಬಯಸುವವರು
ಸಂಪರ್ಕಿಸಿ ಮೊ: 9448633038

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

-: ಸಂಪಾದಕರು :-
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಕನ್ನಡ ಸರ್ಕಾರಿ ಶಾಲೆಗಳ ಅಸ್ಮಿತೆ ಶಾಲಾ ಶಿಕ್ಷಣ ಬಲಪಡಿಸುವ ಉಪಕ್ರಮಗಳು






ಮಾತೃಭಾಷೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದ ಯಾವುದೇ ಮಗುವಿನ ಕಲಿಕೆ ಅರ್ಥಪೂರ್ಣವಾಗುತ್ತದೆ, ಸೃಜನಶೀಲತೆ, ಆಲೋಚನಾ ಶಕ್ತಿ, ತಾರ್ಕಿಕ ಚಿಂತನೆ, ಆತ್ಮ ವಿಶ್ವಾಸ ವನ್ನು ಹೆಚ್ಚಿಸುತ್ತದೆ ಹಾಗೂ ಮುಂದಿನ ಅವನ ಭವಿಷ್ಯವನ್ನು ರೂಪಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತದೆ. ಹಾಗಾಗಿ ಮಾತೃ ಭಾಷೆಯಲ್ಲಿಯೇ ಆರಂಭಿಕ ಶಿಕ್ಷಣವನ್ನು ನೀಡುವುದನ್ನು ಗುರಿ ಯಾಗಿಟ್ಟುಕೊಂಡು ನಮ್ಮ ಹೆಮ್ಮೆಯ ಕನ್ನಡ ಸರ್ಕಾರಿ ಶಾಲೆಗಳು ಹಲವು ದಶಕಗಳಿಂದ ಶಿಕ್ಷಣ ನೀಡುತ್ತಾ ಬಂದಿವೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಕನ್ನಡ ಸರ್ಕಾರಿ ಶಾಲೆಗಳಲ್ಲಿನ ದಾಖಲಾತಿ ಕುಸಿಯುತ್ತ ಬಂದಿದೆ, ನಗರ ಪ್ರದೇಶಗಳಲ್ಲಿ ಸರ್ಕಾರಿ ಶಾಲೆಗೆ ದಾಖಲಾಗುತ್ತಿರುವ ಮಕ್ಕಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತಿರುವುದು, ಶಾಲೆಗಳನ್ನು ಮುಚ್ಚಬೇಕಾದ ಪರಿಸ್ಥಿತಿ ಎದುರಾಗಿರುವುದು ಕಳವಳಕಾರಿ ವಿಷಯವಾಗಿದೆ.

ಸರ್ಕಾರಿ ಶಾಲೆಗಳಲ್ಲಿ ದಾಖಲಾತಿ ಹಾಗೂ ಹಾಜರಾತಿ ಹೆಚ್ಚಿಸಲು ಸರ್ಕಾರ ಉಚಿತ ದಾಖಲಾತಿ, ಮಧ್ಯಾಹ್ನ ಉಪಾಹಾರ ಯೋಜನೆ, ಪೌಷ್ಟಿಕ ಆಹಾರವಾಗಿ ಮೊಟ್ಟೆ -ಬಾಳೆ ಹಣ್ಣು ವಿತರಣೆ, ಉಚಿತ ಪಠ್ಯ ಪುಸ್ತಕ ಹಾಗೂ ಸಮವಸ್ತ್ರ, ಶೂ-ಸಾಕ್ಸ್, ವಿದ್ಯಾರ್ಥಿ ವೇತನ ಹೀಗೆ ಹತ್ತಾರು ಯೋಜನೆ, ಕಾರ್ಯಕ್ರಮಗಳನ್ನು ಜಾರಿಗೆ ತಂದಿದೆ. ಆದಾಗ್ಯೂ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಪೋಷಕರು ಮನಸ್ಸು ಮಾಡುತ್ತಿಲ್ಲ. ಹಿಂದಿನ 80-90 ರ ದಶಕಗಳಲ್ಲಿ ಅತಿ ಹೆಚ್ಚಿನ ಜನ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆಯುತ್ತಿದ್ದರು. ಹಾಗೆಯೇ ಅಂದಿನ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಓದಿದವರು ಇಂದು ಅನೇಕ ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಸಾಧಕರೆನಿಸಿಕೊಂಡಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ದೊರೆಯುತ್ತದೆ ಎನ್ನುವುದಕ್ಕೆ ಅವರೇ ಸಾಕ್ಷಿ. ಸಮಾಜದ ಅತ್ಯಂತ ಕೆಳ ವರ್ಗದ ಬಡ ಹಿಂದುಳಿದ ಮಕ್ಕಳಿಂದ ಹಿಡಿದು ಮೇಲ್ವರ್ಗದ ಮಕ್ಕಳವರೆಗೆ ಎಲ್ಲರಿಗೂ ಜಾತ್ಯತೀತವಾಗಿ, ಧರ್ಮಾತೀತವಾಗಿ ಸಮಾನತೆ-ಸಹೋದರತೆ-ಸಹಬಾಳ್ವೆ-ಸಹಿಷ್ಣುತೆ ಮೌಲ್ಯಗಳನ್ನು ಬೆಳೆಸುವ ದೃಷ್ಟಿಕೋನವನ್ನು ಇಟ್ಟುಕೊಂಡು ಸರ್ಕಾರಿ ಶಾಲೆಗಳು ಶಿಕ್ಷಣವನ್ನು ನೀಡುತ್ತಾ ಬಂದಿವೆ.

ನಮ್ಮ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಉತ್ತಮ ತರಬೇತಿ ಪಡೆದ ಪ್ರತಿಭಾವಂತ ಶಿಕ್ಷಕರಿದ್ದಾರೆ.ಸರ್ಕಾರ ಮೂಲಭೂತ ಸೌಕರ್ಯಗಳಾದ ಶಾಲಾ ಕೊಠಡಿಗಳು, ಕುಡಿಯುವ ನೀರು, ಶೌಚಾಲಯಗಳನ್ನು ಒದಗಿಸಲು ಕೋಟ್ಯಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ ಹಾಗಿದ್ದರೂ ವರ್ಷದಿಂದ ವರ್ಷಕ್ಕೆ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಏಕೆ ಕಡಿಮೆ ಆಗುತ್ತಿದೆ ಎನ್ನುವುದರ ಕುರಿತು ನಾವು ಗಂಭೀರವಾಗಿ ಆಲೋಚಿಸಬೇಕಾಗಿದೆ.

### ಕನ್ನಡ ಸರ್ಕಾರಿ ಶಾಲೆಗಳಲ್ಲಿ ಶೈಕ್ಷಣಿಕ ಪ್ರಗತಿ, ಮಕ್ಕಳ ದಾಖಲಾತಿ ಕುಸಿಯಲು ಕಾರಣಗಳು :

1) **ಶಿಕ್ಷಕರ ಕೊರತೆ :** ಕನ್ನಡ ಸರ್ಕಾರಿ ಶಾಲೆಗಳಲ್ಲಿ ಇತ್ತೀಚಿನ ವರ್ಷಗಳಲ್ಲಿ ಶಿಕ್ಷಕರ ಸಂಖ್ಯೆ ಕಡಿಮೆಯಾಗುತ್ತಿದೆ ಕಾರಣ ಕಾಲ ಕಾಲಕ್ಕೆ ಶಿಕ್ಷಕರ ನಿವೃತ್ತಿಗೆ ಅನುಗುಣವಾಗಿ ನೇಮಕಾತಿಗಳು ನಡೆಯುತ್ತಿಲ್ಲ. ಸರಿ ಸುಮಾರು 60,000 ಶಿಕ್ಷಕರ ಹುದ್ದೆಗಳು ಖಾಲಿ ಉಳಿದಿವೆ. ಇದರಲ್ಲಿ ಕಲ್ಯಾಣ ಕರ್ನಾಟಕದ ಖಾಲಿ ಹುದ್ದೆಗಳ ಸಂಖ್ಯೆ ಹೆಚ್ಚಿದೆ. ಹೀಗಾಗಿ ಖಾಯಂ ಶಿಕ್ಷಕರ ಕೊರತೆಯ ಕಾರಣ ಅತಿಥಿ ಶಿಕ್ಷಕರನ್ನು ಸರ್ಕಾರ ನೇಮಕ ಮಾಡಿಕೊಂಡರೂ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಲು ಹಿಂದೇಟು ಹಾಕುತ್ತಿದ್ದಾರೆ.



ಜಿ. ಜಗದೀಶ.
ಶಿಕ್ಷಕರು. ಶಿವಪುರ

Scan For Digital Colourful
HAMPI TIMES E-paper

2) **ಆಡಳಿತಾತ್ಮಕ ಹೊರೆ :** ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಶಾಲಾ ಮುಖ್ಯಗುರುಗಳ ಪಾತ್ರ ಪ್ರಮುಖವಾಗಿದ್ದು, SATS, ಆಧಾರ್ ವೆರಿಫಿಕೇಷನ್, SSP ವಿದ್ಯಾರ್ಥಿ ವೇತನ ಅರ್ಜಿ ಸಲ್ಲಿಸುವಿಕೆ, APAAR ID ಸೃಜನೆ, ಹಾಗೂ MDM ಅಂಕಿ ಅಂಶಗಳ ಆನ್ಲೈನ್ ಇಂದೀಕರಣ, ಇಲಾಖೆಯ ತುರ್ತು ಸಂದೇಶಗಳಿಗೆ, ಆದೇಶಗಳನುಸಾರ ಮಾಹಿತಿ ಒದಗಿಸುವುದು ಹೀಗೆ ಹಲವಾರು ಕೆಲಸಗಳು ಆಡಳಿತಾತ್ಮಕವಾಗಿ ಹೊರೆಯಾಗುತ್ತಿವೆ, ಎಷ್ಟೋ ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಹುದ್ದೆಗಳು ಖಾಲಿ ಇದ್ದು ಅವುಗಳನ್ನು ಸಹ ಶಿಕ್ಷಕರೇ ನಿರ್ವಹಿಸಬೇಕಾದ ಅನಿವಾರ್ಯ ಪರಿಸ್ಥಿತಿ ಇದೆ. ಇದರಿಂದಾಗಿ ಶಿಕ್ಷಕರ ಸಂಖ್ಯೆ ಕಡಿಮೆ ಇರುವ ಶಾಲೆಗಳಲ್ಲಿ ಆಡಳಿತಾತ್ಮಕ ಕೆಲಸಗಳಿಗೆ ಸಹ ಶಿಕ್ಷಕರ ಸಹಕಾರ ಪಡೆಯಲೇಬೇಕಾಗಿರುವುದರಿಂದ, ತರಗತಿ ಪಾಠ ಬೋಧನೆ-ನಿರ್ವಹಣೆ ಸವಾಲಾಗಿ ಶೈಕ್ಷಣಿಕ ಪ್ರಗತಿ ಕುಂಠಿತವಾಗುತ್ತಿದೆ.

3) **ಸಮುದಾಯದ ಸಹಕಾರದ ಕೊರತೆ :** ಶಾಲೆಯ ಅಭಿವೃದ್ಧಿ ಹಾಗೂ ಶೈಕ್ಷಣಿಕ ಪ್ರಗತಿಗೆ ನೆರವಾಗಲು ಸಮುದಾಯದ ಸಹಭಾಗಿತ್ವಕ್ಕಾಗಿ ಶಾಲೆಗಳಲ್ಲಿ SDMC ಸಮಿತಿಗಳು ರಚನೆಯಾಗಿವೆ. ಆದರೆ SDMC ಸಮಿತಿ ಮತ್ತು ಶಾಲೆಯ ಸಿಬ್ಬಂದಿಯವರ ನಡುವಿನ ಸಮನ್ವಯದ ಕೊರತೆಯಿಂದಾಗಿ ನಿರೀಕ್ಷಿತ ಪ್ರಮಾಣದಲ್ಲಿ ಸಮುದಾಯದ ಸಹಕಾರ ದೊರೆಯುತ್ತಿಲ್ಲ.

4) **ಪೋಷಕರ ನಿರಾಸಕ್ತಿ :** ಸರ್ಕಾರಿ ಶಾಲೆಗಳೆಂದರೆ ಕೇವಲ ಸೌಲಭ್ಯ ಪಡೆಯಲಷ್ಟೇ ಸೀಮಿತ ಎನ್ನುವ ರೀತಿಯಲ್ಲಿ ಪೋಷಕರು ವರ್ತಿಸುತ್ತಿದ್ದಾರೆ, ಮಕ್ಕಳ ಸೌಲಭ್ಯಗಳನ್ನು ಪಡೆಯುವ ಕುರಿತು ಇರುವ ಆಸಕ್ತಿ, ಅವರ ಮಕ್ಕಳ ವಿದ್ಯಾಭ್ಯಾಸದ ಕಡೆಗಿಲ್ಲದಿರುವುದು, ಎಷ್ಟೋ ಗ್ರಾಮೀಣ ಭಾಗದ ಪೋಷಕರಿಗೆ ತಮ್ಮ ಮಕ್ಕಳು ಯಾವ ತರಗತಿಯಲ್ಲಿ ಕಲಿಯುತ್ತಿದ್ದಾರೆ ಎನ್ನುವ ಕನಿಷ್ಟ ಜ್ಞಾನವೂ ಇಲ್ಲ. ಪಾಲಕರಿಗೆ ಶಿಕ್ಷಣದ ಮಹತ್ವದ ಅರಿವಿಲ್ಲದಿರುವುದು ಮಕ್ಕಳ ವಿದ್ಯಾಭ್ಯಾಸವನ್ನು ಕುಂಠಿತಗೊಳಿಸುತ್ತಿದೆ.

5) **ಕೌಟುಂಬಿಕ ಸಮಸ್ಯೆಗಳು :** ಬಡತನ, ನಿರುದ್ಯೋಗ, ಗುಳೆ / ವಲಸೆ ಹೋಗುವುದು, ಆರೋಗ್ಯ ಸಂಬಂಧಿ ಸಮಸ್ಯೆಗಳು, ಕೌಟುಂಬಿಕ ಕಲಹ, ಬಾಲ ಕಾರ್ಮಿಕತೆ, ಬಾಲ್ಯ ವಿವಾಹ

ಮುಂತಾದ ಸಮಸ್ಯೆಗಳಿಂದಾಗಿ ಮಕ್ಕಳು ತಮ್ಮ ಆರಂಭಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಸಾಧ್ಯವಾಗುತ್ತಿಲ್ಲ. ಶಾಲೆಗೆ ಗೈರು ಹಾಜರಾಗುತ್ತಿದ್ದಾರೆ. ಕಲಿಕೆಯಲ್ಲಿ ಹಿಂದುಳಿಯುತ್ತಿದ್ದಾರೆ ಇದರಿಂದಾಗಿ ಅವರ ಉಜ್ವಲ ಭವಿಷ್ಯವೂ ಕಮರಿ ಹೋಗುತ್ತಿದೆ.

6) **ಖಾಸಗಿ ಶಾಲೆಗಳ ಸಂಖ್ಯೆಯಲ್ಲಿನ ಹೆಚ್ಚಳ :** ನಗರ ಪ್ರದೇಶಗಳಲ್ಲಿ ನಾಯಿಕೊಡೆಗಳಂತೆ ಖಾಸಗಿ ಶಾಲೆಗಳು ತಲೆ ಎತ್ತುತ್ತಿವೆ. RTE ಕಾಯ್ದೆ ಅಡಿಯಲ್ಲಿ ಶೇ 25 ರಷ್ಟು ಸೀಟುಗಳನ್ನು ಸರ್ಕಾರಿ ಕೋಟಾದಲ್ಲಿ ಮಕ್ಕಳಿಗೆ ನೀಡುತ್ತೇವೆ ಎನ್ನುವುದರ ಮೂಲಕ ಖಾಸಗಿ ಶಾಲೆಗಳು ಸರ್ಕಾರದಿಂದ ಅನುದಾನ ಪಡೆಯುತ್ತಿವೆ. ಖಾಸಗಿ ಶಾಲೆಗಳ ಅಂದ ಚೆಂದಕ್ಕೆ ಮರುಳಾದ ಪೋಷಕರು ಸಾಲ ಮಾಡಿಯಾದರೂ ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ದಾಖಲಿಸುತ್ತಿದ್ದಾರೆ. ಖಾಸಗಿ ಶಾಲೆಗಳು ಪ್ರವೇಶ ಪರೀಕ್ಷೆಯ ಮೂಲಕ ಮಕ್ಕಳನ್ನು ದಾಖಲಿಸಿಕೊಂಡು, ಜಾಣ ಮಕ್ಕಳನ್ನೇ ಜಾಣರಾಗಿಸುತ್ತಿದ್ದಾರೆ. ಆಂಗ್ಲ ಭಾಷೆಯಲ್ಲಿ ತಮ್ಮ ಮಕ್ಕಳು ನಾಲ್ಕು ಮಾತನಾಡಿದರೆ ಅದೇ ಸಾಧನೆ ಎಂದುಕೊಂಡು, ಆಂಗ್ಲ ಭಾಷೆಯ ವ್ಯಾಮೋಹಕ್ಕೆ ಬಿದ್ದು ಖಾಸಗಿ ಶಾಲೆಗಳತ್ತ ಗ್ರಾಮೀಣ ಹಾಗೂ ನಗರಗಳ ಪೋಷಕರು ಮುಖ ಮಾಡುತ್ತಿರುವುದು, ಸರ್ಕಾರಿ ಕನ್ನಡ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಇಳಿಮುಖವಾಗಲು ಕಾರಣವಾಗುತ್ತಿದೆ.

### ಕನ್ನಡ ಸರ್ಕಾರಿ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ಉಪಕ್ರಮಗಳು :

■ ಹಂತ ಹಂತವಾಗಿ ಸರ್ಕಾರವು ಶಿಕ್ಷಕರ ಹುದ್ದೆಗಳ ನೇಮಕಾತಿ ಮಾಡಿಕೊಳ್ಳುವುದರ ಮೂಲಕ ಪ್ರಾಥಮಿಕ ಶಿಕ್ಷಣವನ್ನು ಉತ್ತಮಗೊಳಿಸಲು ಹಾಗೂ ದಾಖಲಾತಿ ಹೆಚ್ಚಳದ ಮೂಲಕ ಸರ್ಕಾರಿ ಕನ್ನಡ ಶಾಲೆಗಳನ್ನು ಉಳಿಸಿಕೊಳ್ಳಲು ಸಾಧ್ಯವಿದೆ.

■ ಶಾಲಾ ಹಂತದಲ್ಲಿ ಕಾರ್ಯ ನಿರ್ವಹಿಸುವ ಶಿಕ್ಷಕರಿಗೆ ಅನ್ಯ ಕಾರ್ಯಗಳ ಹೊರೆಯನ್ನು ಕಡಿಮೆ ಮಾಡಿ ಶೈಕ್ಷಣಿಕ ಕಾರ್ಯ ಚಟುವಟಿಕೆಗಳಿಗೆ ಅವರನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವುದರ ಮೂಲಕ ಶೈಕ್ಷಣಿಕ ಪ್ರಗತಿ ಹಾಗೂ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದ್ದರಿಂದ ಶಾಲೆಗಳಲ್ಲಿ ಆಡಳಿತಾತ್ಮಕ ಜವಾಬ್ದಾರಿ, ಯೋಜನೆಗಳ ಅನುಷ್ಠಾನ ಹಾಗೂ ಆನ್ಲೈನ್ ಕೆಲಸಗಳನ್ನು ನಿರ್ವಹಿಸಲು ಶಾಲೆಗೊಬ್ಬ ಕ್ಲರ್ಕ್‌ಗಳನ್ನು (ಗುತ್ತಿಗೆ/ಖಾಯಂ )ನೇಮಕ ಮಾಡಿಕೊಂಡರೆ ಶಿಕ್ಷಕರಿಗಿರುವ ಅನ್ಯ ಕಾರ್ಯಗಳ ಹೊರೆ ಕಡಿಮೆ ಆಗುತ್ತದೆ. ಈ ನಿಟ್ಟಿನಲ್ಲಿ ಸರ್ಕಾರ ಗಮನ ಹರಿಸಬೇಕಿದೆ.

■ ಅನೇಕ ಕಡೆ ಶಾಲಾ SDMC ಸಮಿತಿಗಳು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿವೆ. ಅದೇ ಮಾದರಿಯಲ್ಲಿ ರಾಜ್ಯದ ಉಳಿದ ಕಡೆಗಳಲ್ಲಿ ಸಹ ಶಾಲಾ ಮುಖ್ಯ ಶಿಕ್ಷಕರು, ಸಿಬ್ಬಂದಿಯೊಂದಿಗೆ ಸಮನ್ವಯದಿಂದ ಕೆಲಸ ಮಾಡಿದಲ್ಲಿ ಸರ್ಕಾರಿ ಕನ್ನಡ ಶಾಲೆಗಳು ಎಲ್ಲ ರೀತಿಯಲ್ಲಿ ಅಭಿವೃದ್ಧಿಯಾಗುವುದರಲ್ಲಿ ಸಂದೇಹವಿಲ್ಲ.

■ ಪೋಷಕರಿಗೆ ಜಾಗೃತಿ : ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ ತಮ್ಮ ಮಕ್ಕಳ ಶಿಕ್ಷಣದ ಪ್ರಗತಿ, ಸಮಸ್ಯೆಗಳು ಹಾಗೂ ಅವರ ಭವಿಷ್ಯದ ಕುರಿತಾಗಿ ಶಿಕ್ಷಕರು ವೈಯಕ್ತಿಕ ಕಾಳಜಿಯಿಂದ ಪೋಷಕರಿಗೆ ಜಾಗೃತಿಯನ್ನು ಮೂಡಿಸುವುದು ಅತ್ಯಗತ್ಯ ಉಪಕ್ರಮವಾಗಿದೆ. ಆದ್ದರಿಂದ ತಿಂಗಳಿಗೊಮ್ಮೆಯಾದರು ವಿದ್ಯಾರ್ಥಿ-ಪೋಷಕರ ಸಭೆಗಳನ್ನು ಕರೆದು ಶಾಲೆಯ ಮಕ್ಕಳ ಶೈಕ್ಷಣಿಕ ಪ್ರಗತಿ, ಕುಂದು ಕೊರತೆಗಳ ಬಗ್ಗೆ ಚರ್ಚಿಸುವುದರ ಮೂಲಕ ಪೋಷಕರಿಗೆ ಶಿಕ್ಷಣದ ಕುರಿತಾಗಿ ಜಾಗೃತಿ ಮೂಡಿಸಬೇಕಿದೆ.

■ ಮಕ್ಕಳ ಕೌಟುಂಬಿಕ ಹಿನ್ನೆಲೆ, ಸಮಸ್ಯೆಗಳು ಹಾಗೂ ಕಲಿಕಾ ತೊಂದರೆಗಳನ್ನು ಶಿಕ್ಷಕರು ಅರ್ಥ ಮಾಡಿಕೊಂಡು ಅವರೊಂದಿಗೆ ತಾಳ್ಮೆ, ಪ್ರೀತಿ ಹಾಗೂ ಸಹಾನುಭೂತಿಯಿಂದ ವರ್ತಿಸುವುದರ ಮೂಲಕ ಮಕ್ಕಳ ಮನಸ್ಸನ್ನು ಗೆದ್ದು ಕಲಿಕೆಯ ಕಡೆಗೆ ಅವರನ್ನು ಕೊಂಡೊಯ್ಯಬೇಕಿದೆ. ಮಕ್ಕಳಿಗೆ ಜಾಣ-ದಡ್ಡರು ಎಂದು ಹಣೆಪಟ್ಟಿ ಕಟ್ಟದೇ ಅವರ ಕಲಿಕಾ ವೇಗ, ವೈಯಕ್ತಿಕ ಭಿನ್ನತೆಗಳನ್ನು ಗೌರವಿಸಿ ಅವರನ್ನು ಕಲಿಯಲು ಪ್ರೇರೇಪಿಸಬೇಕಾಗಿದೆ. ಸೂಕ್ತ ಆಕರ್ಷಕ ತರಗತಿ ಕಲಿಕಾ ವಾತಾವರಣವನ್ನು ಶಿಕ್ಷಕರು ನಿರ್ಮಿಸಬೇಕಾಗಿದೆ.

■ ಈಗಾಗಲೇ ಆಂಗ್ಲ ಮಧ್ಯಮದಲ್ಲಿ ಮಾತೃ ಭಾಷೆ ಬಳಸಿ ನಮ್ಮ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣವನ್ನು ನೀಡಲು ಪ್ರಾರಂಭಿಸಲಾಗಿದೆ, ಅದನ್ನು ಪರಿಣಾಮಕಾರಿಯಾದಂತಹ ರೀತಿಯಲ್ಲಿ ಅನುಷ್ಠಾನಗೊಳಿಸಿ ಪೋಷಕರ ಖಾಸಗಿ ಶಾಲೆಗಳ ವ್ಯಾಮೋಹವನ್ನು ಕಡಿಮೆ ಮಾಡಬೇಕಾಗಿದೆ.

■ ಕನ್ನಡ ಶಾಲೆಗಳಲ್ಲಿ ಓದುವ ಮಕ್ಕಳಿಗೆ ಸರ್ಕಾರದಿಂದ ದೊರೆಯುವ ಎಲ್ಲ ಸೌಲಭ್ಯ ಹಾಗೂ ಮೀಸಲಾತಿಯ ಬಗ್ಗೆ ದಾಖಲಾತಿ ಆಂದೋಲನದ ಮೂಲಕ ಸಮುದಾಯಕ್ಕೆ ಹಾಗೂ ಪೋಷಕರಿಗೆ ಮನವರಿಕೆ ಮಾಡಿ ಹೆಚ್ಚು ಹೆಚ್ಚು ಮಕ್ಕಳು ನಮ್ಮ ಕನ್ನಡ ಸರ್ಕಾರಿ ಶಾಲೆಗಳಿಗೆ ದಾಖಲಾಗುವಂತೆ ಪ್ರೇರೇಪಿಸಬೇಕಿದೆ. ಇಂತಹ ಹಲವು ಉಪಕ್ರಮಗಳ ಮೂಲಕ ನಮ್ಮ ಸರ್ಕಾರಿ ಕನ್ನಡ ಶಾಲೆಗಳ ಅಸ್ಮಿತೆಯನ್ನು ಕಾಪಾಡಿಕೊಳ್ಳೋಣ.




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕನಸು ಕಾಣು

ಬುದ್ಧಿವಂತಿಕೆಗೆ
ಶ್ರಮಕ್ಕೆ
ತಕ್ಕದಾದ
ನನಸಾಗುವ
ಕನಸು ಕಾಣು

ಅವಕಾಶಕ್ಕಾಗಿ
ಕಾಯುವ ಬದಲು
ಸಿಕ್ಕ ಅವಕಾಶವ
ತನ್ನದಾಗಿಸಿಕೊಳ್ಳುವ
ನನಸಾಗುವ
ಕನಸು ಕಾಣು

ಸತ್ಯದ ನ್ಯಾಯದ
ರೀತಿ ನೀತಿ
ಉಳಿವಿನ
ನನಸಾಗುವ
ಕನಸು ಕಾಣು

ತುತ್ತಿಗಾಗಿ
ಹೊಡೆದಾಡುವವರ
ನೆರಳು ಬಟ್ಟೆಗಾಗಿ
ಬಡಿದಾಡುವವರ
ಕೂಗು ದೂರಮಾಡುವ
ನನಸಾಗುವ
ಕನಸು ಕಾಣು

ಅಳುವ ಹೆಣ್ಣಿನ
ಕಣ್ಣೀರ ಒರೆಸುವ
ಸಾಹಸಮಯದ
ನನಸಾಗುವ
ಕನಸು ಕಾಣು

ಜಿ ಆರ್ ಬಸವರಾಜೇಶ್ವರಿ

REQUIRED

Are you passionate about creativity, branding and making ideas come alive?
We're looking for dynamic individuals to join our Advertising & Marketing Team!

POSITION
- Advertising Manager
- Ad Sales Executive

LOCATION
Vijayanagara Dist.

Who can Apply:
- MBA/BBA in Marketing, Mass Communication, related fields
- Experience in media ad sales or Marketing preferred
- Freshers with strong passion for advertising are welcome too!

Submit Your CV and Portofolio :
96866 63125

# ಮನುಷ್ಯತ್ವವನ್ನೇ ಮರೆಸುತ್ತಿರುವ ಕಾಂಚಣ ಬದುಕುಳಿಯುವುದು ಋಣವಿದ್ದಷ್ಟೇ ಹಣವಿದ್ದಷ್ಟಲ್ಲ

ಹಣ... ಹಣ...ಇವತ್ತಿನ ದಿನಗಳಲ್ಲಿ ಮನುಷ್ಯನ ಜೀವನದಲ್ಲಿ ಹಣವು ಅತ್ಯಂತ ಬಹು ಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಯಾವ ರೀತಿ ಅಂದರೆ.. ಮಾನವ ದೇಹಕ್ಕೆ ರಕ್ತ ಎಷ್ಟು ಮುಖ್ಯವೋ, ಹಣವು ಕೂಡ ಅಷ್ಟೇ ಮುಖ್ಯವಾಗಿ ಹೋಗಿದೆ. ಅಷ್ಟರ ಮಟ್ಟಿಗೆ ಈ ಹಣ ತನ್ನ ಪ್ರಭಾವವನ್ನು ಮನುಷ್ಯನ ಮೇಲೆ ಬೀರಿದೆ. ಈ ಹಣ ಮನುಷ್ಯನಲ್ಲಿರುವ ಪ್ರೀತಿ, ಸ್ನೇಹ, ವಿಶ್ವಾಸ, ಸಂಬಂಧ, ಮನುಷತ್ವ, ಕರುಣೆ, ದಯೆ, ಬಾಂದವ್ಯಗಳನ್ನ ನಾಶ ಮಾಡಿ ತನ್ನ ಅದಿಪತ್ಯವನ್ನ ಸ್ಥಾಪಿಸಿದೆ. ಈ ಮನುಷ್ಯನಿಂದಲೇ ತಯಾರಾದ ಹಣ ಕೊನೆಗೆ ಮನುಷ್ಯನನ್ನೇ ತನ್ನ ಗುಲಾಮನನ್ನಾಗಿ ಮಾಡಿಕೊಂಡಿದೆ. ಈಗ ಜನ ತಾವು ಹುಟ್ಟಿರುವುದು ಹಣ ಗಳಿಸಲಿಕ್ಕೆ ಎಂದು ತಮ್ಮ ಮನದಲ್ಲಿ ಭಾವಿಸಿದ್ದಾರೆ. ಆದರೆ ಜನಕ್ಕೆ ಗೊತ್ತಿಲ್ಲ. ಕೋಟಿ ಕೋಟಿ ಇದ್ದರೂ ಬದುಕುಳಿಯುವುದು ಋಣವಿದ್ದಷ್ಟೇ., ಹಣವಿದ್ದಷ್ಟಲ್ಲ... ಎಂದು. ಹೌದಲ್ಲ ಸ್ನೇಹಿತರೆ.. ಹಾಗಾದರೆ ಬನ್ನಿ ನೋಡೋಣ. ಹಣವೇ ಸರ್ವಸ್ವವಲ್ಲ.....

ಹಣವಿದ್ದರೆ ಎಲ್ಲವನ್ನು ಪಡೆಯಬಹುದಾ...? ಹಣವಿದ್ದರೆ ಎಲ್ಲವೂ ಸಿಗುತ್ತದೆಯಾ...? ಹಣದಿಂದಲೇ ಈ ಪ್ರಪಂಚ ನಡೆಯುತ್ತಿದೆಯಾ...? ಎಂಬ ಪ್ರಶ್ನೆಗಳು ಮೂಡುತ್ತದೆ ಆದರೆ ಇವತ್ತಿಗೂ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳೇ ಸಿಗುತ್ತಿಲ್ಲ. ಆದರೆ ಹಣವಿದ್ದರೆ ಏನನ್ನು ಬೇಕಾದರೂ ಗಳಿಸಬಹುದು ಎಂಬ ಭಾವನೆ ಜನರಲ್ಲಿದೆ. ಇದು ಮೂರ್ಖತನ. ಕೋಟಿ ಕೋಟಿ ಹಣ ವಿದ್ದರೂ ಹೊಟ್ಟೆಗೆ ಅನ್ನವನ್ನು ಮಾತ್ರ ತಿನ್ನಲು ಸಾಧ್ಯ. ಹಣ ತಿನ್ನಲು ಆಗುವುದಿಲ್ಲ. ಹಣದಿಂದ ದುಬಾರಿ ಹಾಸಿಗೆಯನ್ನು ಕೊಳ್ಳಬಹುದೇ ಹೊರತು ನಿದ್ರೆಯನ್ನು ಕೊಳ್ಳಲಾಗುವುದಿಲ್ಲ. ಸತ್ಯ ಅಲ್ಲವೇ. ಎಲ್ಲ ಸಮಯದಲ್ಲೂ ನೀವು ಹಣವನ್ನ ಉಳಿಸಬಹುದು. ಆದರೆ ಎಲ್ಲಾ ಸಮಯದಲ್ಲೂ ನಿಮ್ಮನ್ನ ಹಣ ಉಳಿಸಲಾರದು.

ನನ್ನ ಬಳಿ ಹಣ ಎಷ್ಟಿದೆ ಎನ್ನುವುದಕ್ಕಿಂತ ನಾನು ಎಷ್ಟು ನೆಮ್ಮದಿಯಿಂದ ಇದ್ದೇನೆ ಎನ್ನುವುದು ಬಹಳ ಮುಖ್ಯ. ಈ ಹಣದ ಮದ ಅಹಂಕಾರವನ್ನು ಹೆಚ್ಚಿಸುತ್ತದೆ. ಆದರೆ ಗುಣದ ಮದ ಮಾನವೀಯತೆಯ ಮೌಲ್ಯವನ್ನು ಹೆಚ್ಚಿಸುತ್ತದೆ. ಪ್ರಸ್ತುತ ಸಮಾಜ ಇದನ್ನ ಅರಿಯದೆ ಜೀವನ ಸಾಗಿಸುತ್ತಿದೆ.ಜೇಬಿನಲ್ಲಿ ಹಣ, ಬೆಟ್ಟದಲ್ಲಿ ಹೆಣ., ಎರಡರ ಹಿಂದೆನೇ ಈ ಜನ. ಹೆಣದ ಹಿಂದೆ ಹೋದವರು ಮುಚ್ಚಿ ಬರುವರು ಮಣ್ಣು. ಹಣದ ಹಿಂದೆ ಹೋದವರು ಮುಚ್ಚಿಕೊಳ್ಳುವರು ಮಣ್ಣು. ಎಂಬ ಮಾತಿದೆ. ಅದಕ್ಕೆ ಹೇಳುವುದು ನಿನ್ನ ಜೀವನದಲ್ಲಿ ಯಾವಾಗಾದ್ರೂ ಬಿದ್ದರೆ, ನೀನೇ ಎದ್ದೇಳು . ಯಾಕೆಂದರೆ ಇಲ್ಲಿ ಜನರು ಬಿದ್ದ ಹಣವನ್ನ ಎತ್ತುತ್ತಾರೆ ಹೊರತು, ಮನುಷ್ಯರನ್ನಲ್ಲ... ಈ ಹಣ ಮನುಷತ್ವವನ್ನೇ ಮರೆಸಿದೆ.

ಜನರು ಹಣ ಗಳಿಸುವ ಭರದಲ್ಲಿ, ಶರೀರವನ್ನು ಅಲಕ್ಷ ಮಾಡುವರು, ಆಮೇಲೆ ಮುಂದಿನ ದಿನಗಳಲ್ಲಿ ಶರೀರವನ್ನು ರಕ್ಷಿಸಿಕೊಳ್ಳಲು ಅದೇ ಹಣವನ್ನು ಕಳೆದು ಕೊಳ್ಳುವುದು. ಇದು ಇವತ್ತಿನ ಜನರ ಜೀವಿಸುವ ರೀತಿ ಯಾಗಿದೆ.. ಜನ ಹಣವಿದ್ದವರೇ ಸಂತೋಷದಿಂದಿದ್ದಾರೆ



ಎಂದು ತಿಳಿದಿದ್ದಾರೆ. ಆದರೆ ಹಣ ಇಲ್ಲದೆ ಬಹಳಷ್ಟು ಜನ ತಮ್ಮದೇ ಆದ ರೀತಿಯಲ್ಲಿ ಸುಖ ಸಂತೋಷ ನೆಮ್ಮದಿಯನ್ನು ಕಂಡುಕೊಂಡಿದ್ದಾರೆ. ನಮ್ಮ ಪೂರ್ವಜರ ಕಾಲದಲ್ಲಿ ಜನರು ಹಣಕ್ಕಿಂತ ಹೆಚ್ಚಾಗಿ ಮನುಷ್ಯತ್ವಕ್ಕೆ ಸಂಬಂಧಗಳಿಗೆ ಬೆಲೆ ಕೊಡುತ್ತಿದ್ದರು. ಆದರೆ ಈಗ ದುಡ್ಡೇ...ದೊಡ್ಡಪ್ಪ., ಎಂಬಂತೆ ದುಡ್ಡಿದ್ದರೇನೇ ಅಪ್ಪ–ಅಮ್ಮ., ಬಂದು–ಬಳಗ., ದುಡ್ಡಿಗೆ ಇರುವ ಬೆಲೆ ಸಂಬಂಧಗಳಿಗಿಲ್ಲ... ಅನ್ನುವ ಹಾಗೆ ಈ ಹಣ ತಂದು ನಿಲ್ಲಿಸಿದೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, ನೀವು ಹೆಚ್ಚು ಹಣ ಸಂಪಾದಿಸುವ ಬರದಲ್ಲಿ ನಿಮ್ಮ ಮನೆ, ಕುಟುಂಬ, ಆರೋಗ್ಯವನ್ನು, ಪ್ರಾಣಕ್ಕಿಂತ ಹೆಚ್ಚು ಪ್ರೀತಿಸುವವರನ್ನು ನಿರ್ಲಕ್ಷಸದಿರಿ. ಹಣ ಎಂಬುದು ಶಾಶ್ವತವಲ್ಲ, ಹಣ ಬರುತ್ತೆ ಹೋಗುತ್ತದೆ ಆದರೆ ಪ್ರೀತಿ ವಾತ್ಸಲ್ಯ ಗೌರವ ಮತ್ತು ಆರೋಗ್ಯ ಓಮ್ಮೆ ಕಳೆದುಕೊಂಡರೆ, ಮತ್ತೆ ಗಳಿಸುವುದು ತುಂಬಾ ಕಷ್ಟ . ಹೌದು ಸ್ನೇಹಿತರೆ,



ಡಾ ಪ್ರಸನ್ನ ನಾಡಿಗರ್
9900550684

Scan For Digital Colourful
HAMPI TIMES E-paper

ಇವತ್ತಿನ ವಾಸ್ತವ ಸ್ಥಿತಿ ನಾವು ಹಣ ಗಳಿಸುವುದರಲ್ಲಿ ಹೋಗಿ ನಾವು ನಮ್ಮತನವನ್ನೇ ನಾವು ಮರೆತು ಹೋಗಿದ್ದೇವೆ ಭಾರವಿಲ್ಲದ ನೋಟಿಗೆ ಇರುವ ಬೆಲೆ ಭಾವನೆಗಳಿಗಿರುವ ಮನುಷ್ಯನಿಗೆ ಇಲ್ಲದಂತಾಗಿದೆ ಅದಕ್ಕೆ ಹೇಳುವುದು ಇಡೀ ಪ್ರಪಂಚವನ್ನೇ ತನ್ನ ಅಸ್ತಿತ್ವದಲ್ಲಿ ಉಳಿಸಿಕೊಂಡಿರುವ ಏಕೈಕ ವಸ್ತು ಎಂದರೆ ಅದುವೇ.... ಹಣ ಎಂತಹ ವಿಪರ್ಯಾಸ ಅಲ್ಲವೇ...

ಹಣ ಗಳಿಸಿದವರು ಹಣ ಮಾಡಿದವರು ಇವತ್ತು ಯಾರು ಶಾಶ್ವತವಾಗಿ ಉಳಿದಿಲ್ಲ. ಯಾರು ಸಮಾಜ ಕ್ಕೋಸ್ಕರ, ಮನುಷ್ಯತ್ವ ಕ್ಕೋಸ್ಕರ, ಪ್ರೀತಿ ವಿಶ್ವಾಸಕ್ಕೋಸ್ಕರ, ಹೋರಾಡಿರುವ ಹೆಸರುಗಳೇ ಇವತ್ತು ಉಳಿದಿರುವುದು ಇವತ್ತು ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರ ಬೋಸ್, ಅಂಬೇಡ್ಕರ್ ಮುಂತಾದ ಮಹಾನ್ ವ್ಯಕ್ತಿಗಳು ಹೆಸರುಗಳು ಇವತ್ತು ಜೀವಂತವಾಗಿದ್ದು ಶ್ರೀಮಂತವಾಗಿದೆ. ಇವರು ಹಣದಿಂದ ಶ್ರೀಮಂತರಾದವರಲ್ಲ ಗುಣದಿಂದ ಶ್ರೀಮಂತರಾದವರು ಇವತ್ತಿನ ಪ್ರಪಂಚದಲ್ಲಿ ಹಣ ಗಳಿಸಿದವರ ಹೆಸರು ಯಾರ ಬಾಯಲ್ಲೂ ಮನದಲ್ಲೂ ಇಲ್ಲ... ಆದರೆ ಸಮಾಜದಲ್ಲಿ ಮನುಷ್ಯತ್ವ, ಪ್ರೀತಿ, ವಿಶ್ವಾಸ, ಬಾಂಧವ್ಯ ಸ್ನೇಹಕ್ಕೆ ಬೆಲೆಕೊಟ್ಟು ಬಾಳಿದವರ ಹೆಸರುಗಳು ಮಾತ್ರ ಎಲ್ಲರ ಮನದಲ್ಲಿ ರಾರಾಜಿಸುತ್ತಿವೆ.

ಹಣದಿಂದ ಶ್ರೀಮಂತರಾಗಿ ಉಳಿದವರಿಗಿಂತ, ಗುಣದಲ್ಲಿ ಶ್ರೀಮಂತರಾಗಿ ಉಳಿದವರೇ ಹೆಚ್ಚು. ಸಿರಿತನದಿಂದ ಮನುಷ್ಯನ ಸಂಬಂಧಗಳು ದೂರವಾಗುತ್ತವೆ. ಹಸುಯೇ, ದ್ವೇಷ, ಆಕ್ರೋಶ, ದಂತಹ ನಕರಾತ್ಮಕ ಭಾವನೆಗಳು ಬಾಧಿಸುತ್ತದೆ. ನೈತಿಕ ಮೌಲ್ಯಗಳು ಹಾಳಾಗುತ್ತದೆ.ಜೀವನದ ಬಗ್ಗೆ ಪ್ರಾಮಾಣಿಕ ಸೂತ್ರಗಳು ಬದಲಾಗುತ್ತವೆ.ಆಲೋಚನೆಗಳಿಂದ ಹಣ ಗಳಿಕೆ ಪ್ರಾರಂಭಿಸುತ್ತೇವೆಯ ಹೊರೆತು, ಹಣವು ಆಲೋಚನೆಗಳನ್ನ ಪ್ರಾರಂಭಿಸುವುದಿಲ್ಲ. ಏಕೆಂದರೆ ತಿಂಗಳಿಗೆ ಸಾವಿರ ಗಳಿಸುವವರು ನೆಮ್ಮದಿ ಯಿಂದ ಇದ್ದಾರೆ. ತಿಂಗಳಿಗೆ ಒಂದು ಲಕ್ಷ ಗಳಿಸಿ ನೆಮ್ಮದಿ ಇಲ್ಲದವರು ಇದ್ದಾರೆ. ಹಣವಿದ್ದರೆ ಜೀವನ, ಆದರೆ ಹಣವೇ ಜೀವನವಾಗಬಾರದು...ಅಲ್ಲವೇ

ಸ್ನೇಹಿತರೆ... ಹಣದ ಮೋಹಕ್ಕೆ ಬಿದ್ದರೆ ಸಾಕು, ಮನಸ್ಸು ಎಲ್ಲಿಂದ ಎಲ್ಲಿಗೆ ಹೋಗುತ್ತದೆ. ಎಚ್ಚರಿಕೆಯಿಂದ ಇದ್ದರೆ ಬದುಕು ಬಂಗಾರದ ಕಿರೀಟವಿದ್ದಂತೆ. ಹಣಕ್ಕೆ ಜನರ ಉದ್ಧಾರ ಮಾಡುವ ಶಕ್ತಿಯು ಇದೆ, ಹಾಳು ಮಾಡುವ ಶಕ್ತಿಯು ಇದೆ. ಅದು ಜನರ ಮೇಲೆ ಅವಲಂಬಿತವಾಗಿ ರುತ್ತದೆ. ಇವತ್ತು ಹಣ ನೋಡಿ ಸ್ನೇಹ ಮಾಡುತ್ತಾರೆ, ಪ್ರೀತಿ ಮಾಡುತ್ತಾರೆ, ಮದುವೆಯಾಗುತ್ತಾರೆ, ಇದರಿಂದ ಸ್ನೇಹ. ಪ್ರೀತಿ... ಮದುವೆ.. ಸಂಬಂಧಗಳನ್ನೇ ಮೀರುವ ಶಕ್ತಿ ಹಣಕ್ಕಿದೆ. ಇಂತಹ ಹಣದಿಂದ ನಮ್ಮ ನಿಜವಾದ ಸಂತೋಷ ಖುಷಿಯನ್ನ ನಾವು ಕಳೆದುಕೊಳ್ಳುತ್ತಿದ್ದೇವೆ. ಪ್ರಪಂಚದಲ್ಲಿ ನಾವು ಹುಟ್ಟಿ ಅನುಭವಿಸ್ತಕ್ಕಂತಹ ಖುಷಿ ವಿಚಾರಗಳೇ ಬೇರೆ. ಆದರೆ ಈ ಹಣ ಅಂತಕ್ಕಂತಹ ವಸ್ತುವಿನಿಂದ ನಮ್ಮ ನಿಜವಾದ ಖುಷಿ ಸಂತೋಷ ಭಾವನೆಗಳನ್ನು ನಾವು ಮರೆತುಬಿಟ್ಟಿದ್ದೇವೆ ಇಂಥ ಹಣಕ್ಕೆ ನಾವು ಯಾವಾಗಲೂ ದಾಸರಾಗಿ ಹೋಗಿದ್ದೇವೆ.

ಪ್ರತಿಯೊಬ್ಬ ಮನುಷ್ಯನಿಗೂ ಹಣದ ಅವಶ್ಯಕತೆ ಇದೆ. ಆದರೆ ಆ ಹಣಕ್ಕಾಗಿ ನಾವು ಯಾವತ್ತಿಗೂ ಮನುಷ್ಯತ್ವ, ಪ್ರೀತಿ , ಸ್ನೇಹ, ನಂಬಿಕೆಯನ್ನ ಬಿಡಬಾರದು. ಹಣವಿದ್ದರೆ ಎಲ್ಲಾ, ಹಣವಿದ್ದರೆ ಏನನ್ನಾದರೂ ಸಾಧಿಸಬಹುದು ಎಂಬ ಹುಚ್ಚು ಭ್ರಮೆಯಿಂದ ನಾವು ಹೊರಗೆ ಬರಬೇಕು. ಶ್ರೀಮಂತಿಕೆಯಿಂದ ಬದುಕುವು ದಕ್ಕಿಂತ, ಹೃದಯ ಶ್ರೀಮಂತಿಕೆಯಿಂದ ಬದುಕುವುದು ಮುಖ್ಯವೆಂದು ಅರಿಯಬೇಕು. ಮನೆಯಲ್ಲಿ ಹಣದ ಹೊಳೆಯರಿದರು ಮನದಲ್ಲಿ ನೆಮ್ಮದಿ ಇಲ್ಲದಿದ್ದರೆ ಆ ಹಣವು ವ್ಯರ್ಥ. ಹಣಕ್ಕಿಂತ ಗುಣ ಮುಖ್ಯ, ಶ್ರೀಮಂತರ ಮನೆಯಲ್ಲಿ ಎಷ್ಟೇ ಹಣವಿದ್ದರೂ, ನೆಮ್ಮದಿ ಇಲ್ಲದ ಎಷ್ಟೋ ಸಂಸಾರಗಳಿವೆ. ಆದರೆ ಗಂಜಿಯನ್ನೇ ಕುಡಿದರೂ ತೃಪ್ತಿಯಿಂದ ಇರುವ ಸಂಸಾರಗಳೇ.. ಇದಕ್ಕೆಲ್ಲಕ್ಕಿಂತ ಮಿಗಿಲು..... ಅದಕ್ಕೆ ಹೇಳುವುದು ಹಣವೇ ಸರ್ವಸ್ವವಲ್ಲ.... ಅಲ್ಲವೇ ?

# ಮೇಲುಸ್ತುವಾರಿಯಿಲ್ಲ... ಭಾರತ

ಆ ಮನೆಯ ಮಾಲೀಕರು ತಾವು ಊರಿಗೆ ಹೋಗುವಾಗ ಮನೆಯ ಸುತ್ತಲಿನ ಗಾರ್ಡನ ನ ಎಲ್ಲ ಗಿಡಗಳಿಗೆ ನೀರು ಹಾಕಲು ತಮ್ಮ ಮನೆಯ ಕೆಲಸದ ಹೆಣ್ಣು ಮಗಳಿಗೆ ಹೇಳಿ ಹೋಗಿದ್ದರು. ಮರಳಿ ಬಂದು ನೋಡಿದಾಗ ಬಹಳಷ್ಟು ಗಿಡಗಳ ಎಲೆಗಳು ಮುದುರಿ ಹೋಗಿದ್ದರೆ ಮತ್ತೆ ಕೆಲ ಗಿಡಗಳು ಒಣಗಿ ಹೋಗಿದ್ದವು. ಈ ಕುರಿತು ಕೆಲಸದಾಕೆಯನ್ನು ವಿಚಾರಿಸಿದಾಗ ಎರಡು ದಿನಕ್ಕೊಮ್ಮೆ ತಾನು ನೀರು ಹಾಕಿದ್ದೇನೆ ಆದರೂ ಹೇಗೆ ಒಣಗಿ ಹೋಗಿವೆ ಎಂದು ತನಗೆ ತಿಳಿಯದು ಎಂದು ನೆಲ ಮುಟ್ಟಿ ನೋಡಿ ಹೇಳಿದಳು. ಮಾಲೀಕರು ಮನೆಯಲ್ಲಿ ಇದ್ದ ತಮ್ಮ ಮಗನಿಗೆ ಈ ಕುರಿತು ಪ್ರಶ್ನಿಸಿದಾಗ ಒಂದೆರಡು ಬಾರಿ ಆಕೆ ನೀರು ಬಿಟ್ಟದ್ದನ್ನು ನಾನು ನೋಡಿದ್ದೇನೆ ಎಂದು ಹೇಳಿದ.

ಹಾಗಾದರೆ ಗಿಡಗಳು ಒಣಗಿದ್ದು ಹೇಗೆ? ಮೇಲಿನ ಪ್ರಶ್ನೆಗೆ ನನಗೆ ತನ್ನ ಗುರುವಿನ ಆಜ್ಞೆಯಂತೆ ಕುದುರೆಗೆ ನೀರು ತೋರಿಸಿದ ಶಿಷ್ಯನ ನೆನಪಾಗುತ್ತದೆ. ನೀರು ತೋರಿಸಿಕೊಂಡು ಬಾ ಎಂದರೆ ನೀರು ಕುಡಿಸಿಕೊಂಡು ಬಾ ಎಂದರ್ಥ ಎಂದು ಅರಿಯದ ಶಿಷ್ಯ ನೀರನ್ನು ತೋರಿಸಿದ. ಆ ಶಿಷ್ಯ ಮತ್ತು ಕೆಲಸದಾಕೆ ಇಬ್ಬರೂ ಒಂದೇ ಅಲ್ಲವೇ?! ಹೇಳಿಯೂ ಮಾಡಿ ಮುಗಿಸದ ಕೆಲಸ, ಮಾಡಿದರೂ ಉಪಯೋಗವಾಗದ ಕಾರ್ಯದಿಂದ ಪ್ರಯೋಜನವಾದರೂ ಏನು? ಎಂಬ ಪ್ರಶ್ನೆ ಕಾಡುವ ಸಮಯದಲ್ಲಿ ಮೂಡಿದ ಚಿಂತನೆಯ ಫಲ ಈ ಲೇಖನ.

ಭಾರತ ದೇಶದಲ್ಲಿ ಬೆನ್ನು ಹತ್ತಿ ಕೆಲಸ ಮಾಡಿಸಿಕೊಂಡರೆ ಮಾತ್ರ ಕೆಲಸ ಸಾಧ್ಯವಾಗುತ್ತದೆ. ಮನೆ ಕಟ್ಟುವ ಮೇಸ್ತ್ರಿ ಒಂದು ತಿಂಗಳಲ್ಲಿ ಕೆಲಸ ಮಾಡಿ ಕೊಡುತ್ತೇನೆ ಎಂದು ಹೇಳಿದರೆ ಅದು ಮತ್ತೊಂದು ತಿಂಗಳು ಮುಂದೆ ಹೋಗಿರುತ್ತದೆ. ಮನೆಯ ಸಣ್ಣ ಪುಟ್ಟ ರಿಪೇರಿ ಕೆಲಸಗಳಿಗೆ ಈಗಲೇ ಬಂದೆ ಎಂದು ಹೇಳುವ ವ್ಯಕ್ತಿ ಬರಲು ನಾಲ್ಕೈದು ದಿನಗಳೆ ತಗುಲಬಹುದು. ಅಂಗಡಿಯಲ್ಲಿ ರಿಪೇರಿಗೆ ಎಂದು ಕೊಟ್ಟ ಮಿಕ್ಸಿ ಹಲವು ದಿನಗಳು ಕಾದರೂ ಬರದೇ ಹೋಗಿ ಹೊಸ ಮಿಕ್ಸಿ ತರುವ ಪ್ರಸಂಗ ಬಂದೊದಗುತ್ತದೆ.

ಮನೆ ಕೆಲಸಕ್ಕೆ ಬರುವ ಜನರು ಸರಿಯಾಗಿ ಕೆಲಸ ಮಾಡುವುದಿಲ್ಲ ಎಂದು ಅವರ ಹಿಂದೆ ನಿಂತು ಮೇಲುಸ್ತುವಾರಿ ಮಾಡಲು ನೋಡಿ! ಪ್ರತಿಯೊಂದನ್ನು ಹೇಳಿ ಕೆಲಸ ಮಾಡಿಸಿಕೊಳ್ಳುತಾರೆ ಅವರ ಮನೆ ಕೆಲಸ ಯಾರು ಮಾಡಬೇಕು ಎಂದು ಎರಡೇ ದಿನಗಳಲ್ಲಿ ಕೆಲಸ ಬಿಟ್ಟು ಓಡುತ್ತಾರೆ.... ಹಾಗೆಂದು ತಾವೇನಾದರೂ ಸರಿಯಾಗಿ ಮಾಡುತ್ತಾರೆ ಎಂದಿರಾ? ಉಹೂ! ಅದೂ ಇಲ್ಲ.

ಅತಿ ಹೆಚ್ಚು ದಿನಗೂಲಿ ಸಂಬಳ ಪಡೆಯುವ ಹೊಲಗಳಲ್ಲಿ ಮಾತ್ರ ಮಾಲೀಕರು ಕೆಲಸದಾರರ ಕತ್ತಿನ ಮೇಲೆ ನಿಂತು ಕೆಲಸ ಮಾಡಿಸಿಕೊಳ್ಳಲು ಕಾರಣ.... ಅವರ ಹಣ ಮತ್ತು ದರ್ಪ. ಇಲ್ಲಿಯೂ ಕೂಡ ಕೆಲಸಗಾರರು ಬಾಯಿ ಮುಚ್ಚಿಕೊಂಡು ಕೆಲಸ ಮಾಡಲು ಅವರಿಗೆ ಕೆಲಸದ ಅಭದ್ರತೆ ಕಾಡುವುದರಿಂದಲೇ ಹೊರತು ಮತ್ತಿನ್ನಾವ ಕಾರಣವೂ ಇಲ್ಲ.

ಇನ್ನು ಕೆಲವೆಡೆ ಕೆಲಸ ಖಂಡಿತವಾಗಿಯೂ ಆಗುತ್ತದೆ. ಇಲ್ಲವೆಂದಲ್ಲ ಆದರೆ ಕಣ್ಕಟ್ಟಿನಂತೆ.. ಎಂದೂ ಬಳಸದ ಕೋಣೆಯನ್ನು ಸ್ವಚ್ಛ ಮಾಡಲು ಕೆಲಸದಾಕೆಗೆ ಹೇಳಿದರೆ ಆಕೆ ಮಾಡಿದ್ದೇನೆ ಬೇಕಿದ್ದರೆ ನೋಡಿರಿ ಎಂದು ಆರಾಮಾಗಿ ಹೇಳಲು ಕಾರಣ ನಾವು ಆಕೆಯನ್ನು ನಂಬಿ ಆ ಕೆಲಸದ ಮೇಲುಸ್ತುವಾರಿ ಮಾಡುವುದಿಲ್ಲ ಎಂಬ ಭರವಸೆಯಿಂದ. ಫೋನ್ ರಿಪೇರಿ ಮಾಡುವ ವ್ಯಕ್ತಿ ತನ್ನ ಬಳಿ ರಿಪೇರಿಗೆ ಬಂದಿರುವ ಮತ್ತೊಂದು ಫೋನಿನ ಬ್ಯಾಟರಿಯನ್ನು ನಮ್ಮ ಮೊಬೈಲಿಗೆ ಹಾಕಿ ಫೋನನ್ನು ತೋರಿಸಿದರೆ ನಿಜವೋ ಸುಳ್ಳು ತಪ್ಪು ಸರಿಯೋ ಎಂದು ಗೊತ್ತಿಲ್ಲದ ಅಯೋಮಯ ಸ್ಥಿತಿ ನಮ್ಮದಾಗಿರುತ್ತದೆ.

ನಿಮ್ಮ ಬಟ್ಟೆಗಳನ್ನು ಹೊಲಿಯುವ ಟೇಲರ್ ಅಂತೂ ಇವರೆಲ್ಲರನ್ನು ಮೀರಿಸಿದವ... ಹೇಳಿದ ಸಮಯಕ್ಕೆ ಕೊಟ್ಟವರು ಯಾರೂ ಇಲ್ಲ ಎಂಬ ಹೆಗ್ಗಳಿಕೆ ಆತನದ್ದು.

ಇದೇನು ಎಂದು ಎಲ್ಲರನ್ನೂ ಹೀಗಳೆಯುತ್ತಿದ್ದೇನೆ ಎಂದು ಭಾವಿಸಬೇಡಿ ಎಲ್ಲರೂ ಹೀಗೆಯೇ ಇರುವುದಿಲ್ಲವಾದರೂ ಪ್ರಪಂಚದ ಬಹುತೇಕ ಕೆಲಸ ಕಾರ್ಯಗಳು ಮೇಲುಸ್ತುವಾರಿ ಇಲ್ಲದೆ ಹೋದರೆ ಹೀಗೆಯೇ ನಡೆಯುತ್ತವೆ. ನಮ್ಮಲ್ಲಿ ನಾವು ಕೆಲಸ ಕಾರ್ಯಗಳನ್ನು ಮಾಡಿಕೊಡಲು ತೆರಬೇಕಾದ ಒಂದು ಬೆಲೆ ಇದೆ. ಆ ಬೆಲೆಯೇ ನಮ್ಮ.... ಮೇಲುಸ್ತುವಾರಿ.

ಇತ್ತೀಚಿಗೆ ನನ್ನ ಮಗ ವಾಹನವನ್ನು ಗ್ಯಾರೇಜ್ ನಲ್ಲಿ ಬಿಟ್ಟರೆ ಮೆಕ್ಯಾನಿಕ್ ಹೇಳಿದ ಮಾತನ್ನು ಹೇಳಬೇಕು. ಆತ ಹೇಳಿದ್ದನ್ನೆಲ್ಲ ಮುಂದೆ ನಿಂತು ಮಾಡಿಸಬೇಕು. ನಂತರ ಆತ ಕೆಲಸ ಮಾಡಿರದಿದ್ದರೂ ಆತ ಹೇಳಿದ್ದಕ್ಕೆಲ್ಲ ಹೌದು ಎಂದು ತಲೆಯಾಡಿಸಿ ಅವನು ಹೇಳಿದಷ್ಟು ಹಣ ತೆತ್ತು ವಾಹನವನ್ನು ಬಿಡಿಸಿಕೊಂಡು ಬರಬೇಕು. ಬದಲಾಗಿ ಅಧಿಕೃತ ಸರ್ವಿಸ್ ಸೆಂಟರ್ ಗಳಲ್ಲಿ ರಿಪೇರಿ ಮಾಡಿಸಿಕೊಂಡು ಬರುವುದು ಒಳ್ಳೆಯದು ಎಂದು ಹೇಳಿದ.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ದೇಶದ ಪ್ರತಿ ಮೂಲೆ ಮೂಲೆಯಲ್ಲೂ ಇಂತಹ ಲಕ್ಷಗಟ್ಟಲೆ ವ್ಯವಹಾರಗಳು ನಡೆಯುತ್ತವೆ. ಈ ರೀತಿಯ ವ್ಯವಹಾರಗಳು ನಡೆಯಲು ನಾವು ತೆರಬೇಕಾದದ್ದು ನಮ್ಮ ಮೇಲುಸ್ತುವಾರಿಯ ಬೆಲೆಯನ್ನು ಮತ್ತು ಸಮಯವನ್ನು.

ಈಗ ಹೇಳಿ ನಮ್ಮ ರಾಷ್ಟ್ರೀಯ ಮೂಲಭೂತ ಮೌಲ್ಯಗಳ ಗತಿ ಏನು ಎಂದು? ದೇಶದ ಮಾನ ಬಿಡಿ... ನಮ್ಮ ಆರ್ಥಿಕ ಮೌಲ್ಯಗಳ ಗತಿ ಏನು ಎಂದು?

ಭಾರತೀಯರಲ್ಲಿ ಆರ್ಥಿಕ ಬಡತನವಿದೆ... ಮೋಸ ಮಾಡುತ್ತಾರೆ ಎಂದು ಸಾಕಷ್ಟು ಜನ ಹೇಳುತ್ತಾರೆ... ಆದರೆ ಮೌಲ್ಯಗಳಿಂದ ಸಂಪದ್ಭರಿತ ವಾದ ನಮ್ಮ ದೇಶದಲ್ಲಿ ಮೌಲ್ಯಗಳನ್ನು ಮಣಿಸುವ ಶಕ್ತಿ ಬಡತನಕ್ಕೆ ಇದೆಯೇ? ಎಂದು ಕೇಳಿದರೆ ಹೌದು! ಎಂದು ಮೌನವಾಗಿ ಒಪ್ಪಿಕೊಳ್ಳಬೇಕಾಗಿದೆ. ಇದು ನಮ್ಮ ಸಾಂಸ್ಕೃತಿಕ ಆಧ ಪತನಕ್ಕೂ ಕಾರಣ ವಾಗುತ್ತದೆ ಎಂದರೆ ತಪ್ಪಿಲ್ಲ.

ಆದರೆ ಇದೇ ಭವ್ಯ ಭಾರತ ದೇಶದ ಈಶಾನ್ಯ ಭಾಗದಲ್ಲಿ ಹೀಗೂ ಕಾಣುತ್ತೇವೆ... ರಸ್ತೆ ಬದಿಯಲ್ಲಿರುವ ಎಷ್ಟೋ ಅಂಗಡಿಗಳಲ್ಲಿ ಹಣ್ಣುಗಳು, ತರಕಾರಿಗಳು, ಹೂಗಳ ವ್ಯಾಪಾರ ಜೋರಾಗಿ ನಡೆಯುತ್ತಿರುತ್ತದೆ... ಪ್ರತಿಯೊಂದು ವಸ್ತುವಿನ ಮುಂದೆಯೂ ಅದರ ದರ ಬರೆದು ಇಡಲಾಗಿರುತ್ತದೆ. ಯಾವೊಬ್ಬ ಅಂಗಡಿಯ ಮುಂದೆಯೂ ಅಂಗಡಿಕಾರ ಇಲ್ಲದೆ ಹೋದರೂ ವ್ಯಾಪಾರ ವಹಿವಾಟು ನಡೆಯುತ್ತದೆ. ಜನ ತಮಗೆ ಬೇಕಾದ ವಸ್ತುಗಳನ್ನು ಆರಿಸಿ ತೆಗೆದುಕೊಂಡು ಅಲ್ಲಿ ನಮೂದಿಸಲ್ಪಟ್ಟಿರುವ ಹಣವನ್ನು ಅಲ್ಲಿಯೇ ಇಟ್ಟಿರುವ ಹಣದ ಡಬ್ಬಿಗೆ ಹಾಕುತ್ತಾರೆ... ಯಾವುದೇ ಕಣ್ಗಾವಲಿನ ಕ್ಯಾಮೆರಾಗಳಿಲ್ಲ, ವ್ಯಾಪಾರಿಯ ಅಣ್ಣ ತಮ್ಮ, ಅಕ್ಕ ತಂಗಿ, ಸೋದರ ಸಂಬಂಧಿಗಳಿಲ್ಲ.. ಆದರೂ ಕೇವಲ ನಂಬಿಕೆಯ ಬಲದಲ್ಲಿ ಇಂತಹ ವ್ಯಾಪಾರ ವ್ಯವಹಾರಗಳು ನಡೆಯುತ್ತವೆ ಎಂಬುದಕ್ಕೆ ಅತ್ಯುತ್ತಮ ಉದಾಹರಣೆ ನಮ್ಮ ಭಾರತದ ಈಶಾನ್ಯ ಭಾಗದ ರಾಜ್ಯಗಳು.

ನಮ್ಮದೇ ಸಂಸ್ಕೃತಿಯ ಭಾಗವಾಗಿರುವ ಈಶಾನ್ಯ ರಾಜ್ಯಗಳ ಕೆಲ ಪ್ರದೇಶಗಳಲ್ಲಿ ನಂಬಿಕೆಯ ಆಧಾರದಿಂದ ವ್ಯಾಪಾರ ವ್ಯವಹಾರಗಳು ನಡೆಯುತ್ತವೆ ಎಂದಾದರೆ ನಮ್ಮಲ್ಲಿ ಏಕಿಲ್ಲ ಎಂಬ ಪ್ರಶ್ನೆ ನಮ್ಮನ್ನು ಕಾಡಬಹುದು. ಅಲ್ಲವೇ?

ನಾವು ಭಾರತೀಯರು ಅತ್ಯಂತ ಹೆಮ್ಮೆಯಿಂದ ಹೇಳುತ್ತೇವೆ ಜೀವ ಹೋದರೂ ಕೊಟ್ಟ ಮಾತಿಗೆ ತಪ್ಪಲಾರೆನು ಎಂದು... ಆದರೆ ಹಾಗೆ ನಡೆದುಕೊಳ್ಳುತ್ತೇವೆಯೇ ಎಂಬುದು ಪ್ರಶ್ನಾರ್ಹ? ರಾಮನ ಮಾತೃ ಭೂಮಿಯಲ್ಲಿ ನಾವು ಮೌಲ್ಯಗಳನ್ನು ಉಳಿಸಿಕೊಳ್ಳುವಲ್ಲಿ ಸೋಲುತ್ತಿದ್ದೇವೆ ಎಂದರೆ ಹೌದು ಎಂದು ತಲೆತಗ್ಗಿಸುವ ಪರಿಸ್ಥಿತಿ ನಮ್ಮದಾಗಿದೆ.


ನಮ್ಮ ಭಾರತೀಯ ಬಿಪಿಓ ಗಳ ಕಥೆ ಕೂಡ ಹೀಗೆಯೇ ಇದೆ... ಓರ್ವ ವ್ಯವಹಾರ ತಜ್ಞರ ಪ್ರಕಾರ ಪ್ರತಿ 10 ಬ್ರಿಟಿಷ್ ನೌಕರರಿಗೆ ಪರ್ಯಾಯವಾಗಿ 13 1/2 ನೌಕರರನ್ನು ಭಾರತದಲ್ಲಿ ನಾವು ತೆಗೆದುಕೊಳ್ಳಬೇಕಾಗುತ್ತದೆ... ಕಾರಣ ಭಾರತೀಯರ ಅನುತ್ಪಾದಕತೆ. ಆತನ ಪ್ರಕಾರ ಭಾರತೀಯ ನೌಕರ ಅತಿ ಹೆಚ್ಚು ಕರೆಗಳನ್ನು ಸ್ವೀಕರಿಸುತ್ತಾನೆ ನಿರ್ವಹಣಾ ಕಲೆಯನ್ನು ಅರಿತಿದ್ದಾನೆ ಮತ್ತು ಅತಿ ಹೆಚ್ಚು ಗ್ರಾಹಕರನ್ನು ಸಂತೃಪ್ತಿ ಪಡಿಸುತ್ತಾನೆ ನಿಜ, ಆದರೆ ಅದೇ ಶ್ರದ್ಧೆಯನ್ನು ತಮ್ಮ ಕೆಲಸದಲ್ಲಿ ಮುಂದುವರಿಸುವುದಿಲ್ಲ. ಭಾರತೀಯರಲ್ಲಿರುವ ವೃತ್ತಿಪರತೆಯ ಕೊರತೆಯ ಕಾರಣದ ಪರಿಣಾಮವಾಗಿ ನಾವು ಹೆಚ್ಚು ಹೆಚ್ಚು ನೌಕರರನ್ನು ತುಂಬಿಕೊಳ್ಳಬೇಕಾಗುತ್ತದೆ ಮತ್ತು ತರಬೇತಿ ನೀಡಬೇಕಾಗುತ್ತದೆ ಎಂದು ಅವರು ದೂರುತ್ತಾರೆ.

ಇಲ್ಲಿ ಹಣಕಾಸಿನ ಪ್ರಶ್ನೆ ಉದ್ಭವಿಸುವುದಿಲ್ಲ... ಹೇಳಿದ್ದನ್ನು ಮಾಡಬೇಕು ಎಂಬ ಕತ್ತಿನ ಮೇಲೆ ಕುಳಿತು ಕೆಲಸ ಮಾಡಿಸಿಕೊಳ್ಳುವ ಪರಿಸ್ಥಿತಿ ಉದ್ಭವಿಸಲು ಕಾರಣೀಭೂತರು ಯಾರು? ಎಂಬ ಪ್ರಶ್ನೆಯನ್ನು ನಾವು ಎಸೆದಾಗ ಅದು ತಿರುಗುಬಾಣದಂತೆ ಮತ್ತೆ ನಮ್ಮನ್ನೇ ಆವರಿಸಿ ಉತ್ತರವನ್ನು ನೀಡುತ್ತದೆ.

ಒಬ್ಬ ರೈತ ತನ್ನ ಹೊಲದಲ್ಲಿ ಬೆಳೆದು ನಿಂತ ಬೆಳೆಯನ್ನು ಕೊಯ್ಯಲು ಮೊದಲು ತನ್ನ ಮಗನಿಗೆ ಹೇಳಿ ಆತ ಮಾಡದೆ ಹೋದಾಗ ತನ್ನ ಕೆಲಸದಾತನಿಗೆ ಹೇಳುತ್ತಾನೆ. ಆ ಕೆಲಸದಾತನು ಮಾಡದೆ ಹೋದಾಗ ಖುದ್ದು ತಾನೇ ಮಾಡಲು ತಯಾರಾದಾಗ ಅಲ್ಲಿ ಗೂಡು ಕಟ್ಟಿಕೊಂಡು ಮರಿಗಳನ್ನು ಸಾಕುತ್ತಿದ್ದ ತಾಯಿ ಪಕ್ಷಿ ಇದೀಗ ಬೇರೊಂದು ಕಡೆ ವಲಸೆ ಹೋಗುತ್ತದೆ ಎಂಬ ಕತೆಯನ್ನು ನಾವೀಗಾಗಲೇ ಕೇಳಿದ್ದೇವೆ.

ಒಟ್ಟಿನಲ್ಲಿ ಯಾವುದೇ ಕೆಲಸಗಳು ಮೇಲುಸ್ತುವಾರಿ ಇಲ್ಲದೆ ನಡೆಯುವುದಿಲ್ಲ. ಕೊನೆಯ ಪಕ್ಷ ನಮ್ಮ ನಮ್ಮ ಕೆಲಸಗಳನ್ನು ನಾವು ಸರಿಯಾಗಿ ಮಾಡಿ ಮುಗಿಸೋಣ ಏನಂತೀರಾ ಸ್ನೇಹಿತರೇ?

OUR OFFERINGS:
Sales & Distribution – Genuine Toshiba photocopiers and GALTECH Smart panels
Service & Maintenance – Expert technical support and AMC services
Consumables & Accessories – Genuine spare parts
TOSHIBA GALTECH
M:9686663132
SAI MANI ENTERPRISES
Authorized Dealer of Toshiba Photocopiers & GALTECH Sirius interactive flat panel display for Vijayanagara, Bellary and Koppal Districts
# 545/A 6th Ward, Hampi Road, HOSAPETE-583201, Vijayanagara Dist.



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 13–05–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1586.16 ಅಡಿ |
| ಒಳ ಹರಿವು | 1547 ಕ್ಯುಸೆಕ್ |
| ಹೊರ ಹರಿವು | 279 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 8.109 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1577.62 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 11 ಕ್ಯುಸೆಕ್ |
| ಸಾಮರ್ಥ್ಯ | 3.423 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ವೈಶಾಖ । ಸಂವತ್ಸರ: ವಿಶ್ವಾವಸು

14–05–2025 – ಬುಧವಾರ

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಅನುರಾಧ |
| ಯೋಗ | : ಪರಿಘ |
| ಕರಣ | : ತೈತುಲ |
| ಸೂರ್ಯೋದಯ | : 05:47:29 |
| ಸೂರ್ಯಾಸ್ತ | : 18:59:21 |
| ರಾಹು ಕಾಲ | : 12:23–14:02 |
| ಯಮಘಂಡ ಕಾಲ | : 07:26–09:05 |
| ಗುಳಿಕ ಕಾಲ | : 10:44–12:23 |

# ಮಿಯಾಜಾಕಿ ಮಾವಿನ ಹಣ್ಣು ಕೆಜಿಗೆ 2.5 ಲಕ್ಷ ರೂ

## ಕೊಪ್ಪಳ ಮಾವು ಪ್ರದರ್ಶನ–ಮಾರಾಟ ಮೇಳ | 12 ತಳಿಗಳ ಮಾವು | ಮಿಯಾಜಾಕಿ ಜಪಾನ್ ತಳಿ

■ **ಹಂಪಿ ಟೈಮ್ಸ್ ಕೊಪ್ಪಳ**


ತೋಟಗಾರಿಕೆ ಬೆಳೆಗಳಾದ ಮಾವು, ದಾಳಿಂಬೆ, ಪಪ್ಪಾಯಿಗಳಿಂದ ರೈತರಿಗೆ ಹೆಚ್ಚಿನ ಲಾಭ ಸಿಗುವುದರಿಂದ ರೈತರು ಇವುಗಳನ್ನು ಬೆಳೆಸುವುದರ ಕಡೆಗೆ ಹೆಚ್ಚಿನ ಒತ್ತು ನೀಡಬೇಕೆಂದು ಕೊಪ್ಪಳ ಶಾಸಕ ಕೆ.ರಾಘವೇಂದ್ರ ಹಿಟ್ನಾಳ ಹೇಳಿದರು.

ಕೊಪ್ಪಳ ತೋಟಗಾರಿಕೆ ಇಲಾಖೆ ವತಿಯಿಂದ ಕೊಪ್ಪಳ ನಗರದ ತೋಟಗಾರಿಕೆ ಇಲಾಖೆ ಉಪನಿರ್ದೇಶಕರ ಕಛೇರಿ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕೊಪ್ಪಳ ಮಾವು ಮೇಳ–2025. ಪ್ರದರ್ಶನ ಹಾಗೂ ಮಾರಾಟ ಮೇಳ ಉದ್ಘಾಟಿಸಿ ಮಾತನಾಡಿದರು.

ಹೆಚ್ಚು ಮಾವು ಬೆಳೆದ ರೈತರಿಗೆ ಮಾರ್ಕೆಟಿಂಗ್ ಆಗಬೇಕೆಂದು ತೋಟಗಾರಿಕೆ ಇಲಾಖೆ ಕೊಪ್ಪಳ ವತಿಯಿಂದ ಕೊಪ್ಪಳ ಮಾವು ಮೇಳ ಕಾರ್ಯಕ್ರಮವನ್ನು ಪ್ರತಿ ವರ್ಷ ಹಮ್ಮಿಕೊಳ್ಳಲಾಗುತ್ತಿದೆ. ಮಾವಿನ ಹಣ್ಣುಗಳನ್ನು ಬೆಳೆದ ರೈತರಿಗೆ ಸರಿಯಾದ ಬೆಲೆ ಸಿಗಬೇಕು ಕಳೆದ ವರ್ಷಕ್ಕಿಂತ ಈ ವರ್ಷ ಹೆಚ್ಚಿನ ಮಳೆಯಾಗಿ ರುವುದರಿಂದ ಮಾವಿನ ಬೆಲೆ ಸ್ವಲ್ಪ ಕಡಿಮೆಯಾಗಿದೆ ಎಂದರು. ಈ ಮೇಳದಲ್ಲಿ ಒಂದು ಕೆ. ಜಿ ಮಿಯಾಜಾಕಿ ಹಣ್ಣಿನ ಬೆಲೆ 2. 50 ಲಕ್ಷ ಇರುವ ಹಣ್ಣನ್ನು ಪ್ರದರ್ಶನಕ್ಕೆ ಇಟ್ಟಿರುವುದು ಮೇಳದ ಮತ್ತೊಂದ ವಿಶೇಷತೆಯಾಗಿದೆ ಇಂತಹ ಹಣ್ಣುಗಳನ್ನು ನಮ್ಮ ಭಾಗದಲ್ಲಿ ರೈತರು ಬೆಳೆಯುವಂತಾಗಬೇಕೆಂದು ಹೇಳಿದರು.

ಕೊಪ್ಪಳ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಕೃಷ್ಣ ಸಿ. ಉಕ್ಕುಂದ ಮಾತನಾಡಿ, ಮೇ 22ರ ವರೆಗೆ ಹತ್ತು ದಿನಗಳ ಕಾಲ ತೋಟಗಾರಿಕೆ ಕಚೇರಿ ಆವರಣದಲ್ಲಿ ನಡೆಯಲಿದೆ. 100ಕ್ಕೂ ಹೆಚ್ಚು ರೈತರು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು, ಮೇಳದಲ್ಲಿ 30ಕ್ಕೂ ಹೆಚ್ಚು ಸ್ಟಾಲ್‌ಗಳ ವ್ಯವಸ್ಥೆಯನ್ನು ಮಾಡಲಾಗಿದೆ. ರೈತರು ನೈಸರ್ಗಿಕವಾಗಿ ಮಾಗಿಸಿದ ಹಣ್ಣುಗಳನ್ನು ಯೋಗ್ಯ ಬೆಲೆಯಲ್ಲಿ ಮಾರಾಟಕ್ಕೆ ಅನುಕೂಲ ಕಲ್ಪಿಸಲಾಗಿದೆ. ಇದರಿಂದ ಗ್ರಾಹಕರಿಗೆ ಮಾರಕಟ್ಟೆಗಿಂತಲೂ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ನೈಸರ್ಗಿಕವಾದ ಹಣ್ಣುಗಳು ಸಿಗಲಿವೆ. 100 ಕ್ಕೂ ಹೆಚ್ಚು ತಳಿಯ ವಿವಿಧ ಮಾವಿನ ಹಣ್ಣುಗಳನ್ನು ಪ್ರದರ್ಶನಕ್ಕಿಡಲಾಗಿದ್ದು, ಮುಖ್ಯವಾಗಿ ಜಗತ್ತಿನ ದುಬಾರಿ ಮಾವು 'ಮೀಯಾ ಜಾಕೀ' ಮಾವಿನ ಹಣ್ಣು ಈ ಮೇಳದ ವಿಶೇಷ ಆಕರ್ಷಣೆಯಾಗಿದೆ. 'ಮೀಯಾ ಜಾಕೀ' ಮಾವಿನ ತಳಿಯ ಸಸಿಗಳಿಗೆ ಬಹಳ ಬೇಡಿಕೆಯಿದ್ದು, ಈ ಸಸಿಗಳನ್ನು ಸಹ ಮೇಳದಲ್ಲಿ ಮಾರಾಟಕ್ಕಿಡಲಾಗಿದೆ ಎಂದರು.





ಕೊಪ್ಪಳ ಜಿಲ್ಲೆಯ 6 ಸಾವಿರ ಹೆಕ್ಟರ್ ಪ್ರದೇಶದಲ್ಲಿ ಮಾವು ಬೆಳೆಯಲಾಗುತ್ತಿದೆ. ಈ ಮೇಳದಲ್ಲಿ ನಮ್ಮ ಜಿಲ್ಲೆಯ 10 ರಿಂದ 12 ತಳಿಯ ಮಾವಿನ ಹಣ್ಣುಗಳು ಮಾರಾಟಕ್ಕಿಡಲಾಗಿದ್ದು, ಕೊಪ್ಪಳ ಕೇಸರ್ ಮಾವಿನ ಹಣ್ಣಿಗೆ ಬೇಡಿಕೆ ಹೆಚ್ಚಿದೆ ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಜಿಲ್ಲಾಧಿಕಾರಿ ನಲಿನ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್. ಅರಸಿದ್ದಿ, ಮಾಜಿ ಸಂಸದರಾದ ಕರಡಿ ಸಂಗಣ್ಣ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಟಿ. ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಜೆ.ಶಂಕ್ರಪ್ಪ ಸೇರಿದಂತೆ ವಿವಿಧ ಇಲಾಖೆಗಳ ಹಾಗೂ ತೋಟಗಾರಿಕೆ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

ಕೊಪ್ಪಳ ಮಾವು ಮೇಳದ ವಿವರ: ವಿವಿಧ ತಳಿಯ ಮಾವಿನ ಹಣ್ಣಿನ ಬೆಳೆಗಳನ್ನು ಬೆಳೆಯುತ್ತಿದ್ದು ಇವುಗಳಲ್ಲಿ ಮುಖ್ಯವಾಗಿ ಕೇಸರ್ ತಳಿಯು ಅತ್ಯಂತ ಬೇಡಿಕೆಯ ತಳಿಯಾಗಿದೆ ಹಾಗೂ ದಶಹರಿ, ತೋತಾಪೂರಿ, ಮಲ್ಲಿಕಾ, ಬೆನೆಶಾನ್, ಸಿಂಧೂರಿ. ಇಮಾಮ ಪಸಂದ, ಉಪ್ಪಿನಕಾಯಿ ತಳಿಗಳನ್ನು ಬೆಳೆಯತ್ತಿದ್ದು ರೈತರ ಅನುಕೂಲಕ್ಕಾಗಿ ಹಾಗೂ ಗ್ರಾಹಕರಿಗೆ ಯೋಗ್ಯ ಬೆಲೆಗೆ ಗುಣಮಟ್ಟದ ಹಣ್ಣುಗಳನ್ನು ಮಾರಾಟ ಮಾಡಲು ರೈತರಿಂದ ನೇರವಾಗಿ ಗ್ರಾಹಕರಿಗೆ ತಲುಪಿಸಲು ಈ ಮೇಳವನ್ನು ಆಯೋಜಿಸಲಾಗಿದೆ.

ಈ ಮೇಳದಲ್ಲಿ ಮಾವಿನ ಹಣ್ಣುಗಳನ್ನು ನೈಸರ್ಗಿಕವಾಗಿ ಹಾಗೂ ವೈಜ್ಞಾನಿಕವಾಗಿ ಮಾಗಿಸುವ ಕುರಿತು ಭಾರತೀಯ ತೋಟಗಾರಿಕೆ ಸಂಶೋದನಾ ಸಂಸ್ಥೆ (IIHR), ಹೇಸರಘಟ್ಟ, ಬೆಂಗಳೂರು ರವರು ಅಭಿವೃದ್ಧಿಪಡಿಸಿರುವ ಹಣ್ಣು ಮಾಗಿಸುವ ಘಟಕಗಳನ್ನು ರೈತರಿಗೆ ಇಲಾಖೆಯು ಸಹಾಯಧನದ ಮೂಲಕ ಮಾವು ಬೆಳೆಯುವ ರೈತರಿಗೆ ನೀಡಲಾಗಿದೆ. ನೈಸರ್ಗಿಕವಾಗಿ ಹಣ್ಣುಗಳನ್ನು ಮಾಗಿಸಲು"ಎನ್–ರೈಪ್ (en-ripe)"ಎಂಬ ನೈಸರ್ಗಿಕವಾಗಿ ಹಣ್ಣು ಮಾಗಿಸುವ ಪಂಚ್ ಹೋಲ್ ಪೌಚ್ ಗಳನ್ನು ರೈತರಿಗೆ ಪರಿಚಯಿಸಲಾಗುತ್ತಿದೆ. ಈ ಪೌಚ್‌ನ್ನು ಹೋಲ್ ಮಾಡಿ 10 ಕೆ.ಜಿ. ಮಾವಿನ ಕಾಯಿಯ ಕೆಳಗಡೆ ಇಟ್ಟಾಗ 48 ಗಟೆಗಳಲ್ಲಿ ಗುಣಮಟ್ಟದ ಆರೋಗ್ಯಕರ ಮಾವಿನ ಕಾಯಿಗಳು ಒಂದೇ ರೀತಿಯ ಬಣ್ಣ ಹೊಂದಿ ಹಣ್ಣಾಗುತ್ತವೆ. ಇದು ನೈಸರ್ಗಿಕವಾದ ಇಥಲಿನ್ ಹೊಂದಿರುತ್ತದೆ. ಈ ಪೌಚ್ ಗೆ ರೈತರಿಂದ ಸಾಕಷ್ಟು ಬೇಡಿಕೆ ವ್ಯಕ್ತವಾಗುತ್ತಿದೆ.

ಮಾವಿನ ಹಣ್ಣುಗಳಲ್ಲಿ ಲಭ್ಯವಿರುವ ಪೋಷಕಾಂಶಗಳು, ಖನಿಜಗಳು ಮತ್ತು ಅವುಗಳ ಆರೋಗ್ಯದ ಬಗ್ಗೆ ಮಹತ್ವ ತಿಳಿಸುವ ಬ್ಯಾನರ್‌ಗಳನ್ನು ಪ್ರದರ್ಶಿಸಲಾಗುತ್ತಿದ್ದು, ಗ್ರಾಹಕರಿಗೆ ಇದೊಂದು ವಿಶಿಷ್ಟ ಅನುಭವ ನೀಡಬಲ್ಲದಾಗಿದೆ. ಈ ಮೇಳದಲ್ಲಿ ಮಕ್ಕಳು ಮತ್ತು ಸಾರ್ವಜನಿಕರಿಗೆ ಆಕರ್ಷಕ ಸೆಲ್ಫಿ ಪಾಯಿಂಟ್ ನಿರ್ಮಿಸಲಾಗಿದೆ. ಈ ಸೆಲ್ಫಿ ಪಾಯಿಂಟ್ ಮಾವಿನ ಮಾದರಿ ಹೊಂದಿದ್ದು ಅತ್ಯಾಕರ್ಷಣೆವಾಗಿ ಜನರನ್ನು ಆಕರ್ಷಿಸುತ್ತಿದೆ.

## ಮೈಕ್ರೋ ನ್ಯೂಸ್

### ಪಠ್ಯದ ಜತೆ ಪಠ್ಯೇತರ ಚಟುವಟಿಕೆಯಲ್ಲೂ ಆಸಕ್ತಿ ಬೆಳೆಸಿ

**ಮೊದಲ ಪುಟದಿಂದ**

ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಮಕ್ಕಳು ಶಿಬಿರದಲ್ಲಿ ಹೆಚ್ಚು ಹೆಚ್ಚು ಭಾಗವಹಿಸಿ ಬೇಸಿಗೆ ಶಿಬಿರದಲ್ಲಿ ಇದ್ದಂತಹ ಚಟುವಟಿಕೆಗಳಲ್ಲಿ ಭಾಗವಹಿಸಿ ಆಸಕ್ತಿಯಿಂದ ಕಲಿತು ಪ್ರದರ್ಶನ ಮಾಡಬೇಕು ಎಂದು ಹೇಳಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಹಾಗೂ ಬಾಲ ಭವನ ಕಾರ್ಯದರ್ಶಿ ಪರಶುರಾಮ ವಾಯ್ ಶೇಟ್ಟೆಪ್ಪನವರ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಒಳ್ಳೆಯ ಶಿಕ್ಷಣವನ್ನು ಕಲಿತು ದೊಡ್ಡ ದೊಡ್ಡ ಹುದ್ದೆಗಳನ್ನು ಪಡೆದುಕೊಳ್ಳಬೇಕೆಂದು ಮಕ್ಕಳಿಗೆ ತಿಳಿಸಿದರು.

ಜಿಲ್ಲಾ ನಿರೂಪಣಾಧಿ ಕಾರಿಗಳು ಗಂಗಪ್ಪ, ಕೊಪ್ಪಳ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೋಹಿಣಿ ಕೊಟಗಾರ, ಯಲಬುರ್ಗಾ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಬೆಟ್ಟದೇಶ ಮಾಳೆಕೊಪ್ಪ,ಗಂಗಾವತಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಜಯಶ್ರೀ ಆರ್, ಕುಷ್ಟಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಯಲ್ಲಮ್ಮ ಹಂಡಿ, ಕನಕಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿ ವೀರುಪಾಕ್ಷಿ, ಉತ್ಕರ್ಷ ಸಂಯೋಜಕರು ಪುನೀತ್ ರಾಜ ಸೇರಿದಂತೆ ಸಂಪನ್ಮೂಲ ವ್ಯಕ್ತಿಗಳು ಇದ್ದರು. ಜಿಲ್ಲಾ ಬಾಲ ಭವನ ಸಂಯೋಜಕ ಮೆಹಬೂಬಸಾಬ ಇಲಾಹಿ ಅವರು ಕಾರ್ಯಕ್ರಮ ನಿರೂಪಿಸಿದರು, ಸಿದ್ದಪ್ಪ ಕುರಿ ಅವರು ಸ್ವಾಗತಿಸಿದರು, ಫಾತಿಮಾ ರವರು ವಂದಿಸಿದರು.

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ಲಿಡ್‌ಕರ್ ಅಧ್ಯಕ್ಷ ಮುಂಡರಗಿ ನಾಗರಾಜ ಹೇಳಿಕೆ | ಬಳ್ಳಾರಿಯಲ್ಲಿ ಸಂಭ್ರಮದ ಬುದ್ಧ ಜಯಂತ್ಯೋತ್ಸವ

# ಜ್ಞಾನದ ಬೆಳಕು ಭಗವಾನ್ ಬುದ್ಧ



■ **ಹಂಪಿ ಟೈಮ್ಸ್ ಬಳ್ಳಾರಿ**

ಭಗವಾನ್ ಬುದ್ಧರ ಜ್ಞಾನ ಇಡೀ ಜಗತ್ತಿಗೆ ಪಸರಿಸಿದೆ. ಅವರ ಶಾಂತಿ, ಸಹನೆ, ಸಹಬಾಳ್ವೆ ಸಂದೇಶ ನಮಗೆಲ್ಲರಿಗೂ ಸ್ಫೂರ್ತಿ. ಜ್ಞಾನದ ಬೆಳಕು ಜಗತ್ತಿಗೆ ನೀಡಿದ ಮಹಾನ್ ವ್ಯಕ್ತಿ ಭಗವಾನ್ ಬುದ್ಧ ಅವರ ತತ್ವಾದರ್ಶ ನಾವೆಲ್ಲರೂ ಪಾಲಿಸೋಣ ಎಂದು ಡಾ.ಬಾಬು ಜಗಜೀವನ್ ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ಡಾ. ಜೋಳದರಾಶಿ ದೊಡ್ಡನಗೌಡ ರಂಗಮದಿರದಲ್ಲಿ ಸೋಮವಾರ ಏರ್ಪಡಿಸಿದ್ದ ಭಗವಾನ್ ಬುದ್ಧರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಅಜ್ಞಾನದಿಂದ ಜ್ಞಾನದ ಕಡೆ, ಸಮಾಜದಲ್ಲಿದ್ದ ತಾರತಮ್ಯ ನೀತಿಯ ವಿರುದ್ಧ ಹೋರಾಡಿ ಹೊಸ ವ್ಯವಸ್ಥೆಯ ಸೈದ್ಧಾಂತಿಕ ನೆಲೆಗಟ್ಟನ್ನು ಭದ್ರಗೊಳಿಸಿದ ಮಹಾನ್ ವ್ಯಕ್ತಿ ಭಗವಾನ್ ಬುದ್ಧ. ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್‌ರವರು ಸಹ ಬೌದ್ಧ ಧರ್ಮ ಸ್ವೀಕರಿಸುವ ಮೂಲಕ ಬೌದ್ಧ ಧರ್ಮವನ್ನು ಬೆಂಬಲಿಸಿದರು ಎಂದು ತಿಳಿಸಿದರು.

ಬೌದ್ಧ ಧರ್ಮದ ಸಂಸ್ಥಾಪಕ ಗೌತಮ ಬುದ್ಧ ಮಹಾನ್ ದಾರ್ಶನಿಕ. ಸಿದ್ಧಾರ್ಥ ಎನ್ನುವ ರಾಜವಂಶದ ಕುಡಿ ಸಕಲ ವೈಭೋಗವನ್ನು ತ್ಯಜಿಸಿ, ಜ್ಞಾನೋದಯ ಪಡೆದು ಗೌತಮ ಬುದ್ಧನಾಗುತ್ತಾನೆ. ಲೋಕಕ್ಕೆ ಶಾಂತಿ, ಅಹಿಂಸೆಯ ಮಹತ್ವವನ್ನು ಭೋಧಿಸುತ್ತಾನೆ. ಬುದ್ಧನ ಜನನ, ಮರಣ ಹಾಗೂ ಜ್ಞಾನೋದಯವನ್ನು ಸ್ಮರಿಸುವ ಉದ್ದೇಶದಿಂದ ಪ್ರತಿ ವರ್ಷ ಬುದ್ಧ ಪೂರ್ಣಿಮೆಯನ್ನು ಆಚರಿಸಲಾಗುತ್ತದೆ ಎಂದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಬುದ್ಧನ ಜನನ, ಮರಣ ಹಾಗೂ ಜ್ಞಾನೋದಯ ಸ್ಮರಿಸುವ ಉದ್ದೇಶದಿಂದ ಸರ್ಕಾರದಿಂದ ಪ್ರಥಮವಾಗಿ ಬುದ್ಧ ಜಯಂತಿ ಆಚರಿಸಲಾಗುತ್ತಿದೆ. ಜ್ಞಾನೋದಯ, ಕರುಣೆ ಮತ್ತು ಶಾಂತಿಯನ್ನು ಪರಿಗಣಿಸಲು ಇದು ಮಹತ್ವದ ದಿನವಾಗಿದೆ ಎಂದ ಅವರು, ಬುದ್ಧ ಹೇಳಿದ ಬೌದ್ಧ ಧರ್ಮದ ಮೂರು ಸಂದೇಶವನ್ನು ಇದೇ ವೇಳೆ ಸ್ಮರಿಸಿದರು.

ಸಹಾಯಕ ಆಯುಕ್ತರಾದ ಪಿ.ಪ್ರಮೋದ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ, ಲೋಕಕ್ಕೆ ಶಾಂತಿ, ಅಹಿಂಸೆಯ ಮಹತ್ವ ಭೋದಿಸಿದ ಬುದ್ಧರ ತತ್ವ ಬೋಧನೆ ಅರಿತರೆ ಜೀವನದಲ್ಲಿ ಸುಖ–ಶಾಂತಿ ನೆಮ್ಮದಿ ನೆಲೆಯೂರಲಿದೆ. ಬುದ್ಧನ ಜ್ಞಾನ ಮಾರ್ಗ ಅರಿತರೆ ಅದು ಮನುಷ್ಯರ ಮನಸ್ಸಿನ ಶುದ್ಧಿ ಮತ್ತು ಇದರಿಂದ ದುಃಖ ನಿವಾರಣೆ ಹೊಂದಲು ಸಾಧ್ಯವಾಗಲಿದೆ ಎಂದರು.



ವಿಜಯನಗರ ಜಿಲ್ಲೆಯ ಹಂಪಿ ವಿದ್ಯಾರಣ್ಯ ಕನ್ನಡ ವಿಶ್ವವಿದ್ಯಾಲಯದ ಸಂಸ್ಕೃತಿ ಚಿಂತಕರಾದ ಡಾ.ವೆಂಕಟಗಿರಿ ದಳವಾಯಿ ಅವರು ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಬಳ್ಳಾರಿಯ ಜಡೇಶ್ ಎಮ್ಮಿಗನೂರು ತಂಡದಿಂದ ಬುದ್ಧ ಬಸವ ಅಂಬೇಡ್ಕರ್ ಗೀತೆ ಗಾಯನ ಪ್ರಸ್ತುತ ಪಡಿಸಿದರು.

ಇದಕ್ಕೂ ಮುನ್ನ ಭಗವಾನ್ ಬುದ್ಧ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಗಣ್ಯರು ಕಾರ್ಯಕ್ರಮ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಭಾರತೀಯ ಬೌದ್ಧ ಮಹಸಭಾ ಜಿಲ್ಲಾ ಘಟಕ ಅಧ್ಯಕ್ಷ ಕಮಲರತ್ನ ಬಂತೇಜಿ, ಅಂಬೇಡ್ಕರ್ ಸಂಘದ ಜಿಲ್ಲಾಧ್ಯಕ್ಷ ಅನಂತ ಕುಮಾರ್ ಸೇರಿದಂತೆ ವಿವಿಧ ಸಂಘ–ಸಂಸ್ಥೆಗಳ ಪದಾಧಿಕಾರಿಗಳು, ಮುಖಂಡರು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

**ಸಂಭ್ರಮದ ಮೆರವಣಿಗೆ:** ಭಗವಾನ್ ಬುದ್ಧರ ಜಯಂತ್ಯೋತ್ಸವದ ಅಂಗವಾಗಿ ನಗರದಲ್ಲಿ ಸಂಭ್ರಮದ ಮೆರವಣಿಗೆ ನಡೆಯಿತು. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಕೆ.ಇ.ಚಿದಾನಂದಪ್ಪ ಅವರು ಭಗವಾನ್ ಬುದ್ಧ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು. ಮೆರವಣಿಗೆಯಲ್ಲಿ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಗಮನ ಸೆಳೆದವು.

ಮೆರವಣಿಗೆಯು ನಗರದ ಡಾ.ರಾಜ್ ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಜಿಲ್ಲಾಧಿಕಾರಿಗಳ ಕಚೇರಿ, ರೈಲ್ವೆ ಸ್ಟೇಷನ್ ರಸ್ತೆ, ಹೆಚ್.ಆರ್.ಗವಿಯಪ್ಪ ವೃತದ ಮೂಲಕ ಡಾ.ಜೋಳದರಾಶಿ ದೊಡ್ಡನಗೌಡ ರಂಗಮದಿರದ ವೇದಿಕೆ ಸಭಾಂಗಣಕ್ಕೆ ತಲುಪಿ ಸಂಪನ್ನಗೊಂಡಿತು.

# ಗ್ರಾಮ ದೇವತೆ ಊರಮ್ಮ ಜಾತ್ರೆಗೆ ಪೂರ್ವಭಾವಿ ಸಭೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಗ್ರಾಮ ದೇವತೆ ಜಾತ್ರೆಗೆ ಸೂಕ್ತ ಕಾನೂನು ಸುವ್ಯವಸ್ಥೆ ಕಾಪಾಡಲು ಸಾರ್ವಜನಿಕರ ಸಹಕಾರ ಅತ್ಯಗತ್ಯ ಎಂದು ಸಿಪಿಐ ಪ್ರಲ್ಹಾದ್ ಆರ್ ಚೆನ್ನಗಿರಿ ಮನವಿ ಮಾಡಿದರು.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಇದೇ 20 ರಿಂದ ಆರಂಭವಾಗುವ ಶ್ರೀ ಗ್ರಾಮ ದೇವತೆ ಊರಮ್ಮ ಜಾತ್ರೆಗೆ ಸೂಕ್ತ ಬಂದೋಬಸ್ತ್ ಕೈಗೊಳ್ಳುವ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಕಳೆದ 15 ವರ್ಷಗಳ ನಂತರ ಜರುಗುವ ದೇವಿ ಜಾತ್ರೆಗೆ ದೂರದ ಸಂಬಂಧಿಗಳು, ನೆಂಟರು ಬರುವ ಕಾರಣ ಪಟ್ಟಣದಲ್ಲಿ ವಾಹನ ಸಂಚಾರ ಹೆಚ್ಚಾಗಿ ಟ್ರಾಫಿಕ್ ಸಮಸ್ಯೆ ತಲೆದೋರುವುದು, ಆ ಕಾರಣಕ್ಕೆ 20 ರಿಂದ ಟ್ರಾಫಿಕ್ ಜಾಮ್ ತಪ್ಪಿಸಲು ಪಟ್ಟಣದಲ್ಲಿ ಕಾರುಗಳ ಓಡಾಟವನ್ನು ನಿಷೇಧಿಸಿ ಪಟ್ಟಣದ ಹೊರಗಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗುವುದು. ಪಟ್ಟಣದ ಒಳಗೆ ಸಾರ್ವಜನಿಕರು ಮುಕ್ತವಾಗಿ ಓಡಾಡಲು ಅನುಕೂಲವಾಗುವುದು. ಬೈಕ್‌ಗಳು, ಸಾರಿಗೆ ಬಸ್ ಸಂಚರಿಸಲಿ. ಮೇ 22 ರಂದು ರಥೋತ್ಸವ ನಿಮಿತ್ತ ಮಧ್ಯಾಹ್ನ ನಂತರ ಬಸ್ ಸೇರಿದಂತೆ ವಾಹನಗಳನ್ನು ಸಂಪೂರ್ಣ ನಿಷೇಧಿಸಿ ಪಟ್ಟಣದ ಹೊರಗಡೆ ಸಂಚಾರಕ್ಕೆ ಅನುವು ಮಾಡಿಕೊಡುವುದಾಗಿ ತಿಳಿಸಿ, ಇದಕ್ಕೆ ಪಟ್ಟಣದ ಸಾರ್ವಜನಿಕರು ಸಹಕಾರ ಅಗತ್ಯ ಎಂದು ತಿಳಿಸಿದರು. ಮೇ 20 ರಿಂದ 24 ರವರೆಗೆ ಗ್ರಾಮ ದೇವತೆಯ ಎಲ್ಲಾ ಧಾರ್ಮಿಕ ಕಾರ್ಯಕ್ರಮಗಳು ಸುಗಮವಾಗಿ ನಡೆಯಲು ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು. ರಥೋತ್ಸವ ಹೋಗುವ ಮಾರ್ಗದಲ್ಲಿ ಅಂಗಡಿ ಮುಂಗಟ್ಟುಗಳು ಹಾಗೂ ಮರಗಳು ಇದ್ದು ಮುಖಂಡರ ಸಹಕಾರ ದಿಂದ ಪಪಂ ಸಿಬ್ಬಂದಿಗಳ ಮೂಲಕ ಅವುಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

ಪಿಎಸ್ಐ ಸಿ. ಪ್ರಕಾಶ್, ಪಟ್ಟಣದ ದೈವಸ್ಥರಾದ ಕೆ.ಎಚ್.ವೀರನ ಗೌಡ, ಹಿ.ಮ.ಚಿದಾನಂದ ಸ್ವಾಮಿ, ಜೋಯಿಸ್ ಹಯವಧನ, ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಸಣ್ಣ ಕೊತ್ಲಪ್ಪ, ಟಿ.ಜಿ.ಮಲ್ಲಿಕಾರ್ಜುನ ಗೌಡ, ಕೆ.ಬಿ.ಕೊಟ್ರೇಶ್, ಪಪಂ ಸದಸ್ಯ ಸಿರಬಿ ಮಂಜುನಾಥ, ಗುರಿಕಾರ ರಾಘವೇಂದ್ರ, ಗುಜ್ಜಲ ಗಣೇಶ, ರಾಮಾಂಜನಿ, ಕೆ.ಬಿ.ನಾಗರಾಜ, ಸುರೇಶ್, ಕೆ.ಬಿ.ಮಂಜುನಾಥ, ಶಿವಣ್ಣ, ಬಿ.ಕೆ.ರಾಘವೇಂದ್ರ, ಥಾಣಿ ರಾಘವೇಂದ್ರ ಸೇರಿದಂತೆ ಅನೇಕರು ಇದ್ದರು.